**ಭಾರತ ಸರ್ವೋಚ್ಚ ನ್ಯಾಯಾಲಯ**
**ಕ್ರಿಮಿನಲ್ ಮೇಲ್ಮನವಿಯ ನ್ಯಾಯವ್ಯಾಪ್ತಿ**

**ಕ್ರಿಮಿನಲ್ ಮೇಲ್ಮನವಿ ಸಂಖ್ಯೆ: 957/2017**

**ಎಂ.ಇ. ಶಿವಲಿಂಗಮೂರ್ತಿ –ವಿರುದ್ಧ– ಸೆಂಟ್ರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್, ಬೆಂಗಳೂರು**

**ತೀರ್ಪು**

**ನ್ಯಾಯಮೂರ್ತಿ ಶ್ರೀ ಕೆ.ಎಂ. ಜೋಸೆಫ್:**

1. ಅಪೀಲುದಾರನು ತನ್ನನ್ನು ಬಿಡುಗಡೆಗೊಳಿಸಲು ಕೋರಿ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಿ, ದಂಡಾಧಿಕಾರಿಗಳು ಜಾರಿಗೊಳಿಸಿದ ಆದೇಶವನ್ನು ತಳ್ಳಿಹಾಕಿದ ಉಚ್ಚ ನ್ಯಾಯಾಲಯದ ಆದೇಶದ ವಿರುದ್ಧ ಈ ಅಪೀಲನ್ನು ನಿರ್ದೇಶಿಸಲಾಗಿರುತ್ತದೆ.

2. ದೋಷಾರೋಪ ಪಟ್ಟಿಯನ್ನು ಪ್ರಥಮ ತನಿಖಾ ವರದಿಯ ಆಧಾರದ ಮೇಲೆ ದಿನಾಂಕ: 01.10.2011ರಂದು ಸಲ್ಲಿಸಲಾಗಿರುತ್ತದೆ. ಆ ಪ್ರಸಕ್ತ ಸಮಯದಲ್ಲಿ ಅಪೀಲುದಾರರು ಕರ್ನಾಟಕ ರಾಜ್ಯದಲ್ಲಿ ಗಣಿ ಮತ್ತು ಭೂ ವಿಜ್ಞಾನದ ನಿರ್ದೇಶಕರಾಗಿದ್ದನು. ಮೆ॥ ಅಸೋಸಿಯೇಟೆಡ್ ಮಿನರಲ್ ಕಂಪನಿ (ಸಂಕ್ಷಿಪ್ತವಾಗಿ 'ಎಎಂಸಿ') ಎಂಬ ಹೆಸರಿನಲ್ಲಿ ಒಂದು ಪಾಲುದಾರಿಕೆ ಸಂಸ್ಥೆ ಇರುತ್ತದೆ. ಸದರಿ ಸಂಸ್ಥೆಯ ವ್ಯವಹಾರಗಳ ಸುತ್ತ ಅಪರಾಧಗಳು ಸುಳಿಯುತ್ತಿವೆ ಎಂದು ಆರೋಪಿಸಲಾಗಿರುತ್ತದೆ. ಎರಡನೇ ಆಪಾದಿತಳ ಗಂಡನು ಮೊದಲನೇ ಆಪಾದಿತನಾಗಿರುತ್ತಾನೆ. ಅವರು 2009ರಲ್ಲಿ ಸಂಸ್ಥೆಯ (ಎ.ಎಂ.ಸಿ) ಪಾಲುದಾರರಾಗಿರುತ್ತಾರೆ. ಅಪೀಲುದಾರರು ಮೂರನೇ ಆಪಾದಿತರಾಗಿರುತ್ತಾನೆ. ದೋಷಾರೋಪ ಪಟ್ಟಿಯಲ್ಲಿ ಮೊದಲನೇ ಆಪಾದಿತರು ಮತ್ತು ಎರಡನೇ ಆಪಾದಿತರ ನಡುವಿನ ಪಿತೂರಿಯ ಉಲ್ಲೇಖವಿರುತ್ತದೆ. ಇತರೆ ವಿಷಯಗಳ ಜೊತೆಗೆ, ಹೊಸ ಪಾಲುದಾರರಾದ ಮೊದಲನೇ ಆಪಾದಿತರು ಮತ್ತು ಎರಡನೇ ಆಪಾದಿತರಿಗೆ ಮಿನರಲ್ ಡಿಸ್ಪ್ಯಾಚ್ ಪರ್ಮಿಟ್ (ಸಂಕ್ಷಿಪ್ತವಾಗಿ 'ಎಂ.ಡಿ.ಪಿ') ಯನ್ನು

ನೀಡಲು ಕರ್ನಾಟಕದಲ್ಲಿ ಹೊಸಪೇಟೆಯ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಉಪ ನಿರ್ದೇಶಕರಿಗೆ ನಿರ್ದೇಶನಗಳನ್ನು ಕೋರುತ್ತಾ, ಮೇಲ್ಮನವಿದಾರರಿಗೆ ತಿಳಿಸುವ ಒಂದು ದಿನಾಂಕವಿಲ್ಲದ ಪತ್ರವನ್ನು ಮಾಜಿ ಪಾಲುದಾರರಾದ ಶ್ರೀ ಕೆ.ಎಂ. ವಿಶ್ವನಾಥ್‌ರವರಿಂದ ಅವರ ನಿವೃತ್ತಿಯ ನಂತರ ದಿನಾಂಕ: 01.08.2009ರ ಪರಿಣಾಮದೊಂದಿಗೆ ಪಡೆದುಕೊಂಡಿರುತ್ತಾರೆ ಎಂದು ಆಪಾದಿಸಲಾಗಿರುತ್ತದೆ. ಅದಲ್ಲದೇ ಕಾನೂನು ಅಭಿಪ್ರಾಯಕ್ಕಾಗಿ ಹೆಚ್ಚುವರಿ ನಿರ್ದೇಶಕರು ಅನುಮೋದಿಸಿದ ಮತ್ತು ಶಿಫಾರಸು ಮಾಡಿದ ವಿಷಯವನ್ನು ಉಲ್ಲೇಖಿಸಲು ಆದೇಶಗಳನ್ನು ಕೋರಿ ಟಿಪ್ಪಣಿಯನ್ನು ಮಂಡಿಸಿದ ಪ್ರಕರಣ ಕಾರ್ಯನಿರ್ವಾಹಕರಿಗೆ ಸದರಿ ಪತ್ರವನ್ನು ಅಪೀಲುದಾರರು ಸೂಚಿಸಿದ್ದರು ಮತ್ತು ಅಪೀಲುದಾರರು ಆದೇಶಗಳಿಗಾಗಿ ಸದರಿ ಟಿಪ್ಪಣಿಯನ್ನು ಮಂಡಿಸಿದ್ದಾರೆ ಎಂದು ತನಿಖೆಯು ಬಹಿರಂಗಪಡಿಸುತ್ತದೆ ಎಂಬುದು ದೃಢಪಟ್ಟಿರುತ್ತದೆ. ಕ್ರಿಮಿನಲ್ ಪಿತೂರಿಯನ್ನು ನಡೆಸಿದ್ದಕ್ಕಾಗಿ ಅಪೀಲುದಾರರನ್ನು ಆಪಾದಿಸಲಾಗಿರುತ್ತದೆ ಮತ್ತು ಅವನ ಅಧಿಕಾರದ ಸ್ಥಾನವನ್ನು ಅಪ್ರಾಮಾಣಿಕತೆಯಿಂದ ದುರ್ಬಳಕೆ ಮಾಡಿರುತ್ತಾರೆ ಮತ್ತು ಕರ್ನಾಟಕ ಸರ್ಕಾರವನ್ನು ವಂಚಿಸುವ ಉದ್ದೇಶದಿಂದ ಮೋಸ ಮಾಡಿರುತ್ತಾರೆ. ಗಣಿಗಳು ಮತ್ತು ಖನಿಜಗಳ ಅಧಿನಿಯಮ, 1957 (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ 'ಅಧಿನಿಯಮ' ಎಂದು ಉಲ್ಲೇಖಿಸಲಾಗಿರುತ್ತದೆ) ಮತ್ತು ಖನಿಜಗಳ ರಿಯಾಯಿತಿ ನಿಯಮಗಳು, 1960 (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ 'ನಿಯಮಗಳು' ಎಂದು ಉಲ್ಲೇಖಿಸಲಾಗಿರುತ್ತದೆ) ಗಳನ್ನು ಉಲ್ಲಂಘಿಸಿರುವುದರ ಮೂಲಕ ಹೊಸ ಪಾಲುದಾರರಾದ ಮೊದಲನೇ ಆಪಾದಿತರು ಮತ್ತು ಎರಡನೇ ಆಪಾದಿತರಿಗೆ ಎಂ.ಡಿ.ಪಿ.ಗಳನ್ನು ನೀಡುವುದಕ್ಕಾಗಿ ಉಪ ನಿರ್ದೇಶಕರೊಂದಿಗೆ (ಕಾನೂನು) ಈ ವಿಷಯವನ್ನು ಚರ್ಚಿಸಿದ್ದುದಾಗಿ ಮತ್ತು ಹೊಸಪೇಟೆಯ ಗಣಿ ಮತ್ತು ಭೂವಿಜ್ಞಾನ ಉಪ ನಿರ್ದೇಶಕರಿಗೆ ನಿರ್ದೇಶಿಸಿದ್ದುದಾಗಿ ಕಡತದಲ್ಲಿ ಸುಳ್ಳು ಟಿಪ್ಪಣಿಯನ್ನು ಉದ್ದೇಶಪೂರಿತವಾಗಿ ಮಾಡಿರುತ್ತಾರೆ. ಬೇರೆ ಆಪಾದಿತನ ವಿಷಯದಲ್ಲಿ ವಿವಿಧ ಆರೋಪಗಳಿವೆ. ಅಪೀಲುದಾರನಿಗೆ ಸಂಬಂಧಪಡುವಷ್ಟರ ಮಟ್ಟಿಗೆ ದೋಷಾರೋಪಪಟ್ಟಿಯಲ್ಲಿ ಮುಂದುವರೆದು ಆಪಾದಿಸಿರುವುದೇನೆಂದರೆ, ಭಾರತೀಯ ದಂಡ ಸಂಹಿತೆ,

1860 (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ 'ಐಪಿಸಿ' ಎಂದು ಸೂಚಿಸಲಾಗಿರುತ್ತದೆ)ರ 120 ಬಿ, 420, 379, 409, 447, 468, 471, 477ಎ ಪ್ರಕರಣಗಳ ಮತ್ತು ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, 1988ರ 13(2) ಮತ್ತು 13(1)(ಸಿ) ಮತ್ತು 13(1)(ಡಿ) ಪ್ರಕರಣಗಳ ಅಡಿಯಲ್ಲಿ ಮೂರನೇ ಆಪಾದಿತನು (ಅಪೀಲುದಾರ) ಒಳಗೊಂಡಂತೆ, ಆಪಾದಿತರು ಮಾಡಿರುವ ಏಳು ಕೃತ್ಯಗಳು ಶಿಕ್ಷಾರ್ಹ ಕ್ರಿಮಿನಲ್ ಅಪರಾಧಗಳೆಂದು ನಿರೂಪಿಸಲಾಗಿರುತ್ತವೆ. ವಿಶೇಷ ಅನುಮತಿ ಅರ್ಜಿ (ಕ್ರಿಮಿನಲ್) ಸಂಖ್ಯೆ: 7366 – 7367/2010ರಲ್ಲಿ ಮತ್ತು 'ಎಎಂಸಿ'ಯ ಗಣಿಗುತ್ತಿಗೆ ಸಂಖ್ಯೆ: 2434ರ ವಿಷಯದ ಅಕ್ರಮಗಳಲ್ಲಿ ತನಿಖೆಯನ್ನು ಆದೇಶಿಸುವ ಸಂಬಂಧಿತ ವಿಷಯಗಳಲ್ಲಿ ದಿನಾಂಕ: 29.3.2011ರಂದು ಈ ನ್ಯಾಯಾಲಯವು ನೀಡಿದ ಆದೇಶಕ್ಕೆ ಈ ತನಿಖೆಯ ಮೂಲವನ್ನು ಪತ್ತೆ ಹಚ್ಚಬೇಕಾಗಿರುತ್ತದೆ ಎಂಬುದರಲ್ಲಿ ಯಾವುದೇ ಅನುಮಾನ ಇಲ್ಲ. ಆರೋಪಗಳು ಒಳಗೊಂಡಿರುವ ಆಪಾದನೆ ಏನೆಂದರೆ, ಆಪಾದಿತರು ಸರ್ಕಾರಿ ಸ್ವತ್ತಾದ ಖನಿಜ ಅದಿರನ್ನು ಕಳ್ಳತನ ಮಾಡಲು ಪಿತೂರಿ ಮಾಡಿದ್ದರು. ಅವರು ಅರಣ್ಯ ಪ್ರದೇಶದೊಳಗೆ ಮತ್ತು ಬಳ್ಳಾರಿ ಜಿಲ್ಲೆಯ ಇತರೆ ಪ್ರದೇಶಗಳಲ್ಲಿ ಅತಿಕ್ರಮ ಪ್ರವೇಶ ಮಾಡಿರುತ್ತಾರೆ: ಅಕ್ರಮ ಗಣಿಗಾರಿಕೆಯನ್ನು ನಡೆಸಿದ್ದಾರೆ ಮತ್ತು ಅದನ್ನು ಸಾಗಿಸಿದ್ದಾರೆ. ಆದರೂ, ಎರಡನೇ ಆಪಾದಿತ (ಎ2) ನಿಂದ ಏಳನೇ ಆಪಾದಿತ (ಎ 7)ನ ವರೆಗಿನವರು ದಂಡ ಪ್ರಕ್ರಿಯಾ ಸಂಹಿತೆ, 1973ರ ಪ್ರಕರಣ 227ರ ಅಡಿಯಲ್ಲಿ ಬಿಡುಗಡೆ ಕೋರಿ ಅರ್ಜಿಗಳನ್ನು ಸಲ್ಲಿಸಿದ್ದು, ವಿಚಾರಣಾ ನ್ಯಾಯಾಲಯವು ದಿನಾಂಕ: 08.10.2015ರ ಆದೇಶದ ಮೂಲಕ ಎರಡನೇ ಆಪಾದಿತನನ್ನು ಮತ್ತು ಅಪೀಲುದಾರನನ್ನು ಬಿಡುಗಡೆಗೊಳಿಸಿರುತ್ತದೆ. ಇದೇ ಆದೇಶವನ್ನು ಉಚ್ಚ ನ್ಯಾಯಾಲಯವು ಪ್ರಶ್ನಿತ ಆದೇಶದ ಮೂಲಕ ತಳ್ಳಿಹಾಕಿರುತ್ತದೆ.

**ಬಿಡುಗಡೆ ಕೋರಿ ಅಪೀಲುದಾರರಿಂದ ಅರ್ಜಿ:**

3. ಇತರೆ ವಿಷಯಗಳ ಜೊತೆಗೆ ಈ ಕೆಳಗಿನಂತೆ ಹೇಳಲಾಗಿದೆ:

ಅಪೀಲುದಾರರು ಒಬ್ಬ ಸರ್ಕಾರಿ ನೌಕರರಾಗಿ ಪ್ರಾಮಾಣಿಕತೆ ಮತ್ತು ಘನತೆಗೆ ಹೆಸರುವಾಸಿಯಾಗಿದ್ದಾರೆ. ಇವರು ಕೆಲಸ ನಿರ್ವಹಿಸಿದ ಎಲ್ಲಾ ಸ್ಥಳಗಳಲ್ಲಿ ಒಬ್ಬ ಶ್ರೇಷ್ಠ ಮತ್ತು ಪ್ರಾಮಾಣಿಕ ಅಧಿಕಾರಿ ಎಂದು ಹೆಸರು ಗಳಿಸಿದ್ದಾರೆ. ಇವರು ತಮ್ಮ ಕರ್ತವ್ಯಗಳನ್ನು ನಿರ್ವಹಿಸುವ ಅವಧಿಯಲ್ಲಿ ಇವರ ಮೇಲೆ ಒಂದೇ ಒಂದು ಆರೋಪವು ಸಹಾ ಇರ0ುವುದಿಲ್ಲ. ಇವರು ಕರ್ನಾಟಕ ರಾಜ್ಯ ನಾಗರಿಕ ಸೇವೆಯ ಸದಸ್ಯರಾಗಿ ಪ್ರಾರಂಭಿಸಿದರಾದರೂ, ಭಾರತೀಯ ಆಡಳಿತ ಸೇವೆಯ (ಐಎಎಸ್) ವೃಂದಕ್ಕೆ ಪದೋನ್ನತಿಯನ್ನು ಪಡೆದಿದ್ದರು ಮತ್ತು ನಿಷ್ಕಳಂಕ ಸೇವಾದಾಖಲೆಯನ್ನು ಹೊಂದಿದ್ದರು. ಇವರ ಸೇವಾದಾಖಲೆಗೆ ಸಂಬಂಧಿಸಿದಂತೆ, ಗಣಿ ಮತ್ತು ಭೂ ವಿಜ್ಞಾನದ ನಿರ್ದೇಶಕರಾಗಿ ನೇಮಕ ಮಾಡಲಾಗಿರುತ್ತದೆ. ಅಧಿನಿಯಮದ ಪ್ರಕರಣ 26(2)ರ ಅಡಿಯಲ್ಲಿ ನಿಯೋಗದ ಅನುಕೂಲತೆಯಿಂದಾಗಿ ಗುತ್ತಿಗೆ ಪತ್ರವನ್ನು ಕಾರ್ಯಗತಗೊಳಿಸುವುದು ಗಣಿ ಮತ್ತು ಭೂ ವಿಜ್ಞಾನದ ನಿರ್ದೇಶಕರಿಗೆ ಸಂಬಂಧಿಸಿರುತ್ತದೆ. ಬಹು ಹಿಂದೆ 1966ರಲ್ಲಿ ರಾಜ್ಯದಿಂದ ಎಎಂಸಿಗೆ ಗಣಿಗುತ್ತಿಗೆಯನ್ನು ಮಂಜೂರು ಮಾಡಲಾಗಿತ್ತು. ಹೊಸ ಪಾಲುದಾರರನ್ನು ನೇಮಕ ಮಾಡಿರುವುದರಿಂದ ಮತ್ತು ಹಳೇ ಪಾಲುದಾರರ ನಿವೃತ್ತಿಯಿಂದಾಗಿ ಸಂಸ್ಥೆಯನ್ನು ಹಲವಾರು ಬಾರಿ ಪುನರ್‌ರಚನೆ ಮಾಡಲಾಗಿತ್ತು. ಸಂಸ್ಥೆಯು ಪುನರ್ ರಚನೆಯಾದಾಗ, ಪುನರ್‌ರಚನೆಯ ಬಗ್ಗೆ ಮತ್ತು ಹೊಸದಾಗಿ ನೇಮಕವಾಗಿರುವ ಪಾಲುದಾರರಿಂದ 'ಎಎಂಸಿ' ಯ ಹೆಸರಿನಲ್ಲಿ ಗಣಿಗಾರಿಕೆ ಕಾರ್ಯಾಚರಣೆಯ ಬಗ್ಗೆ ಸಂಸ್ಥೆಯು ಭೂ ವಿಜ್ಞಾನ ಇಲಾಖೆಗೆ ತಿಳಿಸಿರುತ್ತದೆ. ಹಲವಾರು ಪುನರ್‌ರಚನೆಗಳಾಗಿದ್ದರೂ ಸ್ವತ್ತು, ಎಂದರೆ, ಗಣಿ ಗುತ್ತಿಗೆಯು, ಸಂಸ್ಥೆಗೆ ಸೇರಿದ್ದಾಗಿರುತ್ತದೆಯೇ ಹೊರತು ಯಾರೇ ವ್ಯಕ್ತಿಗತ ಪಾಲುದಾರರಿಗೂ ಸೇರಿದ್ದಾಗಿರುವುದಿಲ್ಲ ಎಂಬ ಆಧಾರದ ಮೇಲೆ ಗುತ್ತಿಗೆಯ ವರ್ಗಾವಣೆಗಾಗಿ ನಿಯಮಗಳ ನಿಯಮ 37ರ ಅಡಿಯಲ್ಲಿ ಯಾವ ಅರ್ಜಿಯೂ ದಾಖಲಾಗಿರುವುದಿಲ್ಲ. ಆದ್ದರಿಂದ, ಗಣಿ ಗುತ್ತಿಗೆಯ

ವರ್ಗಾವಣೆಯನ್ನು ಕೋರಿ, ನಿಯಮಾವಳಿಗಳ ನಿಯಮ 37ರ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸುವ ಅವಶ್ಯಕತೆ ಇರಲಿಲ್ಲ. ಸ್ವತ್ತಿನ ಎಂದರೆ, ಗಣಿ ಗುತ್ತಿಗೆಯ ಮಾಲೀಕತ್ವವು ಪಾಲುದಾರಿಕೆಯಾಗಿರುವುದರಿಂದ, ಪುನರ್‌ರಚನೆಯು ವರ್ಗಾವಣೆಗೆ ಸಮಾನವಾಗುವುದಿಲ್ಲ ಎಂದು ಇಲಾಖೆಯು ತಿಳಿದುಕೊಂಡಿರುತ್ತದೆ ಎಂದು ನ್ಯಾಯಾಲಯದ ಮುಂದೆ ಅಧಿಕಾರಿಗಳು ಹಾಜರುಪಡಿಸಿದ ದಾಖಲೆಗಳು ಬಹಿರಂಗಪಡಿಸುತ್ತವೆ. ಪುನರ್ ರಚನೆಯ ಸಂಸ್ಥೆಯು ಮೊದಲನೇ ಮತ್ತು ಎರಡನೇ ಆಪಾದಿತರನ್ನು ನೇಮಕ ಮಾಡಿದ ಮೇಲೆ ಇಬ್ಬರು ಹೊಸ ಪಾಲುದಾರರನ್ನು ನೇಮಕ ಮಾಡಿರುವ ಬಗ್ಗೆ ತಿಳಿಸಿ, ಎಂಡಿಪಿ ಯನ್ನು ಕೋರಿ ಉಪ ನಿರ್ದೇಶಕರಿಗೆ ಅರ್ಜಿಯನ್ನು ನೀಡಿರುತ್ತದೆ. ಎಂಡಿಪಿಯನ್ನು ಒದಗಿಸುವುದಕ್ಕಾಗಿ ಅರ್ಜಿಯನ್ನು ಉಪ ನಿರ್ದೇಶಕರಿಗೆ ಕಳುಹಿಸಲಾಗಿರುತ್ತದೆ. ಎಂಡಿಪಿ ಯನ್ನು ಕೋರಿ ನಿರ್ದೇಶಕರಿಗೆ ಸಲ್ಲಿಸಿದ ಅರ್ಜಿಗೆ ಹೆಚ್ಚುವರಿಯಾಗಿ ಸಂಸ್ಥೆಯನ್ನು ಪ್ರತಿನಿಧಿಸುವ ಮಾಜಿ ಪಾಲುದಾರರಾದ ಶ್ರೀ ಕೆ.ಎಂ. ವಿಶ್ವನಾಥ್‌ರವರು, ಮೊದಲನೇ ಮತ್ತು ಎರಡನೇ ಆಪಾದಿತರನ್ನು ನೇಮಕ ಮಾಡಿಕೊಳ್ಳುವ ಮೂಲಕ ಸಂಸ್ಥೆಯನ್ನು ಪುನರ್ ರಚಿಸಿದ ದಾಖಲೆಯನ್ನು ಮಂಡಿಸುತ್ತಾ ನಿರ್ದೇಶಕರಿಗೆ ಅರ್ಜಿಯನ್ನು ಸಲ್ಲಿಸಿದ್ದರು ಮತ್ತು ಅದರ ಪ್ರಕಾರವಾಗಿ, ನಿಯಮಾವಳಿಗಳ ನಿಯಮ 62ರ ಅಡಿಯಲ್ಲಿ ತಿಳಿಸಿದ್ದರು. ಇನ್ನೂ ಮುಂದುವರೆದು, ಇಲಾಖೆಯಿಂದ ಅರ್ಜಿಯು ಸ್ವೀಕೃತವಾದ ನಂತರ, ಗಣಿಗುತ್ತಿಗೆಯ ವಿಭಾಗದಲ್ಲಿ ಪ್ರಕ್ರಿಯೆಗೊಳ್ಳಬೇಕಾಗುತ್ತದೆ ಎಂದು ಹೇಳಲಾಗಿರುತ್ತದೆ. ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಅರ್ಜಿಗಳನ್ನು ಪರಿಗಣಿಸುವಾಗ ಅನುಸರಿಸುವ ಒಂದು ವಿವರವಾದ ವಿಧಾನವಿದೆ. ಪ್ರಾರಂಭದಲ್ಲಿ ಶಾಖಾಧಿಕಾರಿಗಳು ಕಡತವನ್ನು ಪರಿಶೀಲಿಸುತ್ತಾರೆ. ಅರ್ಜಿಯ ಕುರಿತು ಒಂದು ವಿವರವಾದ ಟಿಪ್ಪಣಿಯನ್ನು ತಯಾರಿಸಲಾಗುತ್ತದೆ. ಟಿಪ್ಪಣಿ ಹಾಳೆಯನ್ನು ಹೆಚ್ಚುವರಿ ನಿರ್ದೇಶಕರ ಮುಂದೆ ಪರಿಶೀಲಿಸಿ, ಮಂಡಿಸುವ ಹಿರಿಯ ಅಧಿಕಾರಿಗಳಾಗಿರುವ ಗಣಿ ಗುತ್ತಿಗೆಗಳ ಅಧೀಕ್ಷಕರ ವಿಭಾಗಕ್ಕೆ ಟಿಪ್ಪಣಿ ಹಾಳೆಯೊಂದಿಗೆ ಕಡತವನ್ನು ಕಳುಹಿಸಲಾಗುತ್ತದೆ. ಇಲಾಖೆಯಲ್ಲಿ ಅತ್ಯಂತ ಹಿರಿಯ ಇಲಾಖಾ ಅಧಿಕಾರಿಯಾಗಿರುವ ಹೆಚ್ಚುವರಿ ನಿರ್ದೇಶಕರು ಪೂರ್ಣ ಕಡತವನ್ನು ಪರಿಶೀಲಿಸಿ, ಅದನ್ನು ನಿರ್ದೇಶಕರ

ಮುಂದೆ ಮಂಡಿಸುತ್ತಾರೆ. ಅನ್ವಯವಾಗುವ ಕಾನೂನನ್ನು ಪರಿಗಣಿಸಿ ಅವರು ಆದೇಶವನ್ನು ಜಾರಿ ಮಾಡುತ್ತಾರೆ. ಅರ್ಜಿಯು ಅಧಿಕಾರ ವ್ಯಾಪ್ತಿಯಲ್ಲಿ ಇದ್ದರೆ, ಅವರು ಅದನ್ನು ವಿಲೇವಾರಿ ಮಾಡುತ್ತಾರೆ. ಒಂದು ವೇಳೆ ರಾಜ್ಯ ಸರ್ಕಾರದಿಂದ ಆದೇಶದ ಅವಶ್ಯಕತೆ ಇದ್ದರೆ, ಅದನ್ನು ಹಾಗೆಯೇ ಕಾಮೆಂಟ್‌ಗಳೊಂದಿಗೆ ಉಲ್ಲೇಖಿಸಲಾಗುತ್ತದೆ. ಅಧಿನಿಯಮದ ಪ್ರಕರಣ 26(2)ರ ಅಡಿಯಲ್ಲಿ ನಿಯೋಜನೆಯ ಆಧಾರದ ಮೇಲೆ, ನಿರ್ದೇಶಕರು ಗುತ್ತಿಗೆ ಪತ್ರಕ್ಕೆ ಸಹಿ ಹಾಕುತ್ತಾರೆ.

4. 1966ರಲ್ಲಿ ಶ್ರೀ ಜಾಲಿ ಮಹದೇವಪ್ಪ ಮತ್ತು ಶ್ರೀ ಜಾಲಿ ಮಲ್ಲಿಕಾರ್ಜುನ್ ಇವರಿಂದ ಸಂಸ್ಥೆಯನ್ನು ಸ್ಥಾಪಿಸಲಾಯಿತು ಮತ್ತು ಪಾಲುದಾರಿಕೆ ಅಧಿನಿಯಮದ ಅಡಿಯಲ್ಲಿ ಒಂದು ಸಂಸ್ಥೆಯಾಗಿ, ಎಎಂಸಿ ಎಂಬ ಹೆಸರಿನಲ್ಲಿ ಗುತ್ತಿಗೆ ಪಡೆಯಲಾಯಿತು ಎಂಬುದನ್ನು ಅಪೀಲುದಾರರು ಕಂಡುಕೊಂಡರು. ದಾಖಲೆಗಳ ಆಧಾರದ ಮೇಲೆ ಗುತ್ತಿಗೆಯು ಸಂಸ್ಥೆಯ ಆಸ್ತಿಯಾಗಿದೆ. ಶ್ರೀ ಜೆ. ಮಲ್ಲಿಕಾರ್ಜುನ ಇವರ ನಿವೃತ್ತಿಯಿಂದಾಗಿ ಪಾಲುದಾರರಲ್ಲಿ ಒಬ್ಬರಾಗಿ ಶ್ರೀ ಎಲ್. ಲಿಂಗರಾಜು ಅವರನ್ನು ಸೇರಿಸಿಕೊಳ್ಳುವ ಮೂಲಕ ದಿನಾಂಕ: 30.6.1983ರಂದು ಎಎಮ್‌ಸಿ ಸಂಸ್ಥೆಯನ್ನು ಪುನರ್ ರಚಿಸಲಾಯಿತು. ದಿನಾಂಕ: 13.2.1984ರಂದು ಶ್ರೀ ಜೆ. ಲಿಂಗರಾಜು ನಿವೃತ್ತರಾದರು ಮತ್ತು ಶ್ರೀ ಬಿ. ಆನಂದ ಇವರು ಪಾಲುದಾರರಾಗಿ ಪ್ರವೇಶಿಸಿರುವುದರಿಂದ ಸಂಸ್ಥೆಯು ಮತ್ತೆ ಪುನರ್‌ರಚನೆಯಾಯಿತು. ಶ್ರೀ ಜೆ. ವಾಮದೇವಪ್ಪ ಇವರು ಸಂಸ್ಥೆಯಿಂದ ನಿವೃತ್ತರಾದಾಗ ಇವರ ಸ್ಥಾನದಲ್ಲಿ ಶ್ರೀಮತಿ ಬಿ. ವಾಸಂತಿಯವರು ದಿನಾಂಕ: 13.02.1982ರಂದು ಸೇರಿಕೊಂಡರು. ಶ್ರೀಮತಿ ಬಿ. ವಾಸಂತಿಯವರು ಸಂಸ್ಥೆಯಿಂದ ನಿವೃತ್ತರಾದರು ಮತ್ತು ದಿನಾಂಕ: 13.06.1986ರಂದು ಶ್ರೀ ಬಿ. ವಾಸುದೇವ ಇವರು ಸಂಸ್ಥೆಯ ಪಾಲುದಾರರಾಗಿ ಪ್ರವೇಶಿಸಿದರು. ಶ್ರೀ ಬಿ. ಆನಂದ ಸಂಸ್ಥೆಯಿಂದ ನಿವೃತ್ತರಾದರು ಹಾಗೂ ಶ್ರೀ ಮೊಹಮ್ಮದ್ ಕಾಸಿಮ್ ದಿನಾಂಕ: 10.6.1990ರ ಪಾಲುದಾರಿಕೆಯ ಪತ್ರದ ಮೂಲಕ ಸಂಸ್ಥೆಯಲ್ಲಿ ಪ್ರವೇಶಿಸಿದರು. ಮತ್ತೊಮ್ಮೆ, ಶ್ರೀಮತಿ ಆಶಾ ಮೊಹಮ್ಮದ್ ಹಾರೂನ್ ಇವರು, ನಿವೃತ್ತರಾದ

ಶ್ರೀ ಬಿ. ವಾಸುದೇವ ಇವರ ಸ್ಥಾನಕ್ಕೆ ಪಾಲುದಾರರಾಗಿ ಪ್ರವೇಶಿಸಿದರು. ಶ್ರೀ ಕೆ.ಎಂ. ಪ್ರಭು ಹಾಗೂ ಶ್ರೀಮತಿ ಪಾರ್ವತಮ್ಮ ಇವರನ್ನು ಅಧಿಕಾರಕ್ಕೆ ನೇಮಿಸುವ ಮೂಲಕ ಮತ್ತೊಮ್ಮೆ ಎಎಂಸಿ ಸಂಸ್ಥೆಯು ಪುನರ್‌ರಚನೆಯಾಯಿತು. ಶ್ರೀಮತಿ ಸುಜಾತ ಪ್ರಭು ಹಾಗೂ ಶ್ರೀ ಕೆ.ಎಂ. ಸುಜನ್ ಇವರನ್ನು ಪಾಲುದಾರರನ್ನಾಗಿ ನೇಮಿಸುವ ಮೂಲಕ ಸಂಸ್ಥೆಯು ಮತ್ತೊಮ್ಮೆ ಪುನರ್‌ರಚನೆಯಾಯಿತು. ಕೊನೆಯದಾಗಿ, ಮೊದಲನೆಯ ಆಪಾದಿತ ಹಾಗೂ ಎರಡನೆಯ ಆಪಾದಿತರನ್ನು ದಿನಾಂಕ: 01.09.2009ರಂದು ಪಾಲುದಾರರನ್ನಾಗಿ ನೇಮಿಸಲಾಯಿತು. ಹೀಗೆ 1981ರಿಂದ ಅನೇಕ ಸಂದರ್ಭಗಳಲ್ಲಿ, ಸಂಸ್ಥೆಯು ಪುನರ್‌ರಚನೆಯಾಯಿತು ಮತ್ತು ನಿಯಮ 37ನೇ ನಿಯಮದಡಿಯಲ್ಲಿ ಅರ್ಜಿಯನ್ನು ರಾಜ್ಯ ಸರ್ಕಾರದ ಮುಂದೆ ದಾಖಲು ಮಾಡಲಿಲ್ಲ. ಪಾಲುದಾರರು ಪುನರ್‌ರಚನೆಯ ಕುರಿತು ತಿಳಿಸುತ್ತಾ ಸಂಸ್ಥೆಗಳ ರಿಜಿಸ್ಟ್ರಾರ್‌ರವರ ಮುಂದೆ ನಮೂನೆ ಸಂಖ್ಯೆ: Vಅನ್ನು ದಾಖಲ್ಮಾಡಿದರು. ಒಂದು ಅರ್ಜಿಯನ್ನು 37ನೇ ನಿಯಮದ ಅಡಿಯಲ್ಲಿ ಹಾಗೂ ಸಂಸ್ಥೆಯು ಗಣಿ ಗುತ್ತಿಗೆಯ ಮಾಲೀಕತ್ವ ಹೊಂದಿತ್ತು ಎಂಬುದರ ಆಧಾರದ ಮೇಲೆ ಪುನರ್ ರಚನೆ ಮಾಡಲಾಯಿತು ಎಂಬುದರ ಕುರಿತು ಎಂದೂ ಮನವಿ ಮಾಡಲಾಗಿಲ್ಲ. ನಿಯಮಗಳ 62ನೇ ನಿಯಮದಡಿಯಲ್ಲಿ ಮಾಹಿತಿಯನ್ನು ಮಾತ್ರ ನೀಡಲಾಯಿತು. ಕೇಸ್‌ವರ್ಕರ್ ಆಗಿರುವ ಸಿ.ಡಬ್ಲ್ಯೂ. 24 ಇವರು ಟಿಪ್ಪಣಿ ಹಾಳೆಯೊಂದಿಗೆ ಮಂಡಿಸಲಾಗಿರುವ ಕಾನೂನು ಅಭಿಪ್ರಾಯವನ್ನು ಪಡೆಯುವಂತೆ ಸಲಹೆ ನೀಡಿದ್ದಾರೆ. ನಿಯಮಗಳ 37ನೆಯ ನಿಯಮದ ಅನ್ವಯಿಸುವಿಕೆಯನ್ನು ತಿಳಿಸುವ ಯಾವ ಟಿಪ್ಪಣಿಯನ್ನೂ ಮಂಡಿಸಿಲ್ಲ. ಇಂತಹ ನಿಯಮದ ಅನ್ವಯಿಸುವಿಕೆಯ ಕುರಿತು ಒಂದು ಸಲಹೆ ಸೂಚನೆ ಇದ್ದಿದ್ದರೆ, ಅರ್ಜಿದಾರರು ಸೂಕ್ತ ನಿರ್ಧಾರವನ್ನು ತೆಗೆದುಕೊಂಡಿರುತ್ತಿದ್ದರು. ಲಭ್ಯವಿರುವ ಪೂರ್ವ ನಿದರ್ಶನವನ್ನು ಸಹ ಅವಲಂಬಿಸಲಾಯಿತು. ತೆಗೆದುಕೊಂಡ ನಿರ್ಣಯವು ಒಂದು ಪ್ರಾಮಾಣಿಕ ನಿರ್ಣಯವಾಗಿತ್ತು. ಹೆಚ್ಚುವರಿ ನಿರ್ದೇಶಕರಿಂದ ಅನುಮೋದಿಸಲಾಗಿರುವ ಕಾನೂನು ಅಭಿಪ್ರಾಯವನ್ನು ಪಡೆಯುವ ಸಲಹೆಯನ್ನು ನ್ಯಾಯಾಲಯದ ಮುಂದೆ ನಿಶಾನೆ ಡಿ.765, ಟಿಪ್ಪಣಿ ಹಾಳೆಯಾಗಿ

ಹಾಜರುಪಡಿಸಲಾಯಿತು. ಕಡತವನ್ನು ಪರಿಶೀಲಿಸುವ ಅವಧಿಯಲ್ಲಿ, 37ನೇ ನಿಯಮ ಅನ್ವಯವಾಗುವುದಿಲ್ಲ ಎಂಬುದನ್ನು ಅಪೀಲುದಾರನ ಗಮನಕ್ಕೆ ತರಲಾಯಿತು. ಎ.ಎಂ.ಸಿ ಗೆ ಅನುಮತಿಗಳನ್ನು ನೀಡಬೇಕೇ ಹೊರತು ಪಾಲುದಾರರ ಹೆಸರಿನಲ್ಲಿ ಅಲ್ಲ ಎಂಬ ವಿಷಯದ ಪತ್ರವನ್ನು ಉಪ ನಿರ್ದೇಶಕರು, ಹೊಸಪೇಟೆ, ಇವರಿಗೆ ರವಾನಿಸಲಾಯಿತು. ಹೊಸ ಪಾಲುದಾರರನ್ನು ನೇಮಿಸುವ ಮೂಲಕ ಸಂಸ್ಥೆಯ ಪುನರ್ ರಚನೆ ಜರುಗಿದೆ ಹಾಗೂ ಕಂಪನಿಯ ಹೆಸರಿನಲ್ಲಿ ಅನುಮತಿ ನೀಡಬಹುದೇ ಹೊರತು ಪಾಲುದಾರರ ಹೆಸರಿನಲ್ಲಿ ಅಲ್ಲ ಎಂದು ಅಪೀಲುದಾರರ ಕಡತವನ್ನು ಸ್ವೀಕರಿಸಿದ ನಂತರ ಉಪ ನಿರ್ದೇಶಕರು (ಕಾನೂನು) ರವರನ್ನು ದೂರವಾಣಿ ಮೂಲಕ ಸಂಪರ್ಕಿಸಿ ನಿವೇದಿಸಿಕೊಂಡರು. ನಂತರದ ಹಂತದಲ್ಲಿ ಉಪ ನಿರ್ದೇಶಕರು (ಕಾನೂನು) ರವರು ಅದನ್ನು ಅಲ್ಲಗಳೆದಿರುತ್ತಾರೆ. ಅಧಿನಿಯಮದ 27ನೇ ಪ್ರಕರಣದ ಸಮರ್ಥನೆಯನ್ನು ಅವರು ಕೋರಿದ್ದು, ಅದು ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ನಿರ್ವಹಿಸಿದ ಕಾರ್ಯಗಳನ್ನು ಕಾಪಾಡಿದೆ. ನಿಯಮ 37ರ ಅಡಿಯಲ್ಲಿ ಅನುಮತಿ ಪಡೆಯದಿರುವ, ಸರ್ಕಾರದೊಂದಿಗೆ ಗುತ್ತಿಗೆಗಳನ್ನು ಹೊಂದಿರುವ ಅನೇಕ ಸಂಸ್ಥೆಗಳ ವಿವರಗಳನ್ನು ತಾವು ತನಿಖೆಯ ಸಮಯದಲ್ಲಿ ನೀಡಿದರು ಎಂಬ ಬಗ್ಗೆ ಅವರು ಗಮನಸೆಳೆದರು. ನಿಯಮ 62ರ ಅಡಿಯಲ್ಲಿನ ಪುನರ್ ರಚನೆಯನ್ನು ತಿಳಿಸುವ ಮೂಲಕ ಎಂ.ಡಿ.ಪಿ. ಗಳನ್ನು ಪಡೆಯುವುದಕ್ಕಾಗಿ ನಿರಂತರವಾಗಿ ಅನುಸರಿಸಲಾದ ಕಾರ್ಯವಿಧಾನವನ್ನು ಗಮನಕ್ಕೆ ತರಲಾಯಿತು. ನಿಯಮ 37ರ ಗ್ರಹಿಕೆಯ ಬಗ್ಗೆ ಮತ್ತು ಹಿಂದಿನ ಪೂರ್ವನಿದರ್ಶನಗಳನ್ನು ಆಧರಿಸಿ ಉತ್ತಮ ಆಡಳಿತಾತ್ಮಕ ನಿರ್ಧಾರ ತೆಗೆದುಕೊಳ್ಳುವುದನ್ನು ಮೋಸವೆಂದು ಪರಿಗಣಿಸಬಾರದೆಂದು ವಾದಿಸಲಾಯಿತು. ಅಪೀಲುದಾರರ ಪ್ರಕಾರ, ಆರೋಪ ಪಟ್ಟಿಯನ್ನು ಮತ್ತು ಆಪಾದನೆಗಳನ್ನು ಓದುವುದು ಮೂಲತಃ 'ಐಪಿಸಿ'ಯ 420ನೇ ಪ್ರಕರಣವನ್ನು ಸುತ್ತುವರಿದಿದೆ.

5. ಆರೋಪದ ಸಮರ್ಥನೆಯಲ್ಲಿ ಸಿಡಬ್ಲ್ಯೂ 7, ಸಿಡಬ್ಲ್ಯೂ 21, ಸಿಡಬ್ಲ್ಯೂ 24, ಸಿಡಬ್ಲ್ಯೂ 26, ಸಿಡಬ್ಲ್ಯೂ 202 ಮತ್ತು ಸಿಡಬ್ಲ್ಯೂ 109, ಇವರುಗಳ ಹೇಳಿಕೆಗಳನ್ನು ಪ್ರಾಸಿಕ್ಯೂಷನ್‌ನಿಂದ ಪಟ್ಟಿಯಲ್ಲಿ ಸೇರಿಸಲಾಯಿತು. ಅಪೀಲುದಾರರು ಸಾಕ್ಷಿಗಳ ಹೇಳಿಕೆಗಳನ್ನು ಗುರುತಿಸಿದರು ಹಾಗೂ ಆರೋಪಗಳನ್ನು ರೂಪಿಸಲು ಹಾಜರುಪಡಿಸಿದ ದಸ್ತಾವೇಜುಗಳು ಬಹಳ ಕಡಿಮೆ ಮೇಲ್ನೋಟದ ಸಾಕ್ಷ್ಯಾಧಾರಗಳೆಂಬ ಯಾವ ಸಾಕ್ಷ್ಯಾಧಾರಗಳೂ ಇಲ್ಲ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ.

**ಮ್ಯಾಜಿಸ್ಟ್ರೇಟರಿಂದ ಹೊರಡಿಸಲಾದ ಆದೇಶ:**

6. ಎಎಂಸಿಯನ್ನು ಹಲವಾರು ಸಂದರ್ಭಗಳಲ್ಲಿ ಪುನರ್ ರಚಿಸಲಾಗಿತ್ತು ಎಂಬ ಅಪೀಲುದಾರನ ನಿವೇದನೆಯನ್ನು ನ್ಯಾಯಾಲಯ ಗಮನಿಸಿತು. ಪುನರ್‌ರಚನೆಯನ್ನು ಅಂಗೀಕರಿಸುವುದರಲ್ಲಿ ಯಾವುದೇ ದೋಷ ಕಂಡುಬರಲಿಲ್ಲ. 2009ರಲ್ಲಿ, ಮೊದಲನೆಯ ಹಾಗೂ ಎರಡನೆಯ ಆಪಾದಿತರು ಪಾಲುದಾರರಾದಾಗ ಮಾತ್ರ, ಅಪೀಲುದಾರರಿಗೆ ತಪ್ಪೆನ್ನಲಾಯಿತು. **ಶ್ರೀ ರಾಮಕೃಷ್ಣ ಮೈನಿಂಗ್ ಕಂಪನಿ – ವಿರುದ್ಧ – ಕಮೀಷನರ್ ಆಫ್ ಇನ್‌ಕಮ್ ಟ್ಯಾಕ್ಸ್, ಮೈಸೂರು**. ಈ ಮೊಕದ್ದಮೆಯಲ್ಲಿ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ತೀರ್ಪಿನ ಮೇಲೆ ಅವಲಂಬಿಸಿರುವುದು ಕಾಣಿಸುತ್ತದೆ. ತದನಂತರ, ವಿಘಟನೆ ಅಥವಾ ಪಾಲುದಾರರ ನಿವೃತ್ತಿಯಿಂದ ಒಂದು ಸಂಸ್ಥೆಯ ಆಸ್ತಿಗಳ ಹಂಚುವಿಕೆಗೆ ಸಾಕ್ಷಿಯಾಗುವ ಒಂದು ಲಿಖಿತ ಪತ್ರವು ಹಸ್ತಾಂತರಣಕ್ಕೆ ಸಮನಾಗುವುದಿಲ್ಲ ಎಂಬುದರ ಪ್ರತಿಪಾದನೆಗಾಗಿ ಭಾರತೀಯ ಸ್ಟ್ಯಾಂಪ್ ಅಧಿನಿಯಮ, 1899ರ ಅಡಿಯಲ್ಲಿ ನೀಡಲಾದ ನಿರ್ಣಯಗಳ ಮೇಲೆ ಅವಲಂಬಿಸಲಾಗಿದೆ. ಪ್ರಕರಣ 227 ಮತ್ತು 228ರ ಅಡಿಯಲ್ಲಿ ನಿರ್ವಹಿಸುವುದಕ್ಕೆ ಸಂಬಂಧಿಸಿದ ನಿಯಮಗಳನ್ನು ಚರ್ಚಿಸಿ, ಕೊನೆಯದಾಗಿ, ಅದನ್ನು ಈ ಕೆಳಗಿನಂತೆ ತೀರ್ಮಾನಿಸಲಾಯಿತು:

> "41. ಮೇಲೆ ಹೇಳಲಾದ ಉದ್ಧರಣಗಳ ದೃಷ್ಟಿಯಿಂದ, 1ನೇ ಮತ್ತು 2ನೇ ಆಪಾದಿತರಿಗೆ ಸೇರಿದ ಮೆಸರ್ಸ್ ಅಸೋಸಿಯೇಟೆಡ್ ಮೈನಿಂಗ್ ಕಂಪನಿಗೆ 'ಎಂಒಪಿ' ಯನ್ನು ನೀಡುವಂತೆ ತನ್ನ ಅಧೀನ ಸಿಬ್ಬಂದಿಗೆ ನಿರ್ದೇಶಿಸುವಲ್ಲಿ ಎ–3ರ

ಕಾರ್ಯವು ಅವನಿಗೆ ಕ್ರಿಮಿನಲ್ ಹೊಣೆಯನ್ನು ವಿಧಿಸುವುದಕ್ಕೆ ಸಮನಾಗುವುದಿಲ್ಲ ಎಂಬುದು ಸ್ಪಷ್ಟವಾಗಿದೆ. ಸಿ.ಡಬ್ಲ್ಯೂ.7, 21, 24, 26, 109 ಮತ್ತು 202ರವರ ಹೇಳಿಕೆಯಲ್ಲಿ, ಖನಿಜ ರವಾನೆ ಪರ್ಮಿಟ್ಟನ್ನು ನೀಡಲು ತನ್ನ ಸಿಬ್ಬಂದಿಗಳಿಗೆ ನಿರ್ದೇಶಿಸುವಲ್ಲಿ 1ನೇ ಮತ್ತು 2ನೇ ಆಪಾದಿತರಿಗೆ ಸಹಾಯ ಮಾಡಲು ಎ–3 ಕ್ರಿಮಿನಲ್ ಪಿತೂರಿಯನ್ನು ನಡೆಸಿದ್ದಾನೆಂಬುದನ್ನು ತೋರಿಸಲು ನಿಶ್ಚಿತವಾಗಿ ಯಾವುದೇ ಸಾಕ್ಷ್ಯಾಧಾರವಿಲ್ಲ ಮತ್ತು ಅದರಂತೆ, 3ನೇ ಆಪಾದಿತನ ಪರ ಮಾನ್ಯ ವಕೀಲರ ವಾದದಲ್ಲಿ ಪರಿಗಣನೀಯ ವಿವೇಚನೆಯಿದೆ ಹಾಗೂ ಮಾನ್ಯ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್‌ರವರು ಮಾಡಿದ ವಾದವನ್ನು ಅಂಗೀಕರಿಸಲು ನನಗೆ ಸಾಧ್ಯವಾಗಿಲ್ಲ. ಆದ್ದರಿಂದ, ಐ.ಎ. ಸಂಖ್ಯೆ: 30 ಪುರಸ್ಕರಿಸಲು ಅರ್ಹವಾಗಿದೆ ಎಂದು ನಾನು ಉತ್ತರಿಸುತ್ತೇನೆ".

**ಉಚ್ಚ ನ್ಯಾಯಾಲಯದ ನಿರ್ಣಯಗಳು:**

7. ಪರಸ್ಪರ ವಿರೋಧದ ವಾದಗಳನ್ನು ಗಮನಿಸಿದ ನಂತರ, 'ಐಪಿಸಿ'ಯ 120ಬಿ ಪ್ರಕರಣದ ಅಡಿಯಲ್ಲಿ ಶಿಕ್ಷಿಸುವುದಕ್ಕಾಗಿ ಪಿತೂರಿಯನ್ನು ಪ್ರಾಸಿಕ್ಯೂಷನ್ ಸಾಬೀತುಪಡಿಸಬೇಕಾದ ಅಗತ್ಯತೆಯಿದೆ ಎಂಬುದನ್ನು ನ್ಯಾಯಾಲಯವು ಗಮನಿಸಿದೆ. ಒಪ್ಪಂದವು ಕಾನೂನುಬಾಹಿರವಾಗಿದ್ದು, ಇದನ್ನು ಅವಶ್ಯಕ ಇಂಗಿತದಿಂದ ಸಾಬೀತುಪಡಿಸಬಹುದು. ಇದನ್ನು ಕಾನೂನು ಬಾಹಿರ ಕೃತ್ಯಗಳ ಊಹೆಯಿಂದ ಅಥವಾ ಪಿತೂರಿಗಾರರ ಲೋಪಗಳಿಂದ ಬಹುಮಟ್ಟಿಗೆ ಸಾಬೀತುಪಡಿಸಬಹುದು. ವಿಷಯವು ಕಾನೂನಿನ ಅಭಿಪ್ರಾಯವನ್ನು ಅಗತ್ಯಪಡಿಸುತ್ತದೆಯೆಂಬಷ್ಟರಮಟ್ಟಿಗೆ ಕಚೇರಿ ಟಿಪ್ಪಣಿಯ ಹೊರತಾಗಿ, ಅಧಿನಿಯಮದ ಒಟ್ಟಾರೆ ಉಲ್ಲಂಘನೆಯಲ್ಲಿ ಎಂಡಿಪಿಗಳ ನೀಡಿಕೆಯನ್ನು ಅಪೀಲುದಾರರು ಶಿಫಾರಸ್ಸು ಮಾಡಿದ್ದಾರೆಂಬುದು ಪ್ರಾಸಿಕ್ಯೂಷನ್ ಸಂಗ್ರಹಿಸಿದ ಅಪರಾಧದಲ್ಲಿ ಸಿಕ್ಕಿಸುವ ಸಾಕ್ಷ್ಯವಾಗಿದೆಯೆಂಬುದನ್ನು ಗಮನಿಸಲಾಗಿದೆ. ಅಪೀಲುದಾರನ ನಿಲುವು ಏನೆಂದರೆ, ಅವನು ಕಾನೂನು ಇಲಾಖೆಯೊಂದಿಗೆ ಚರ್ಚಿಸಿದ ವಿಷಯವನ್ನು

ಸಿಡಬ್ಲ್ಯು 21 ಅಂಗೀಕರಿಸಿಲ್ಲವೆಂಬುದಾಗಿದೆ. ಹಲವಾರು ಬಾರಿ 'ಎಎಂಸಿ' ಯನ್ನು ಪುನರ್ ರಚಿಸಲಾಯಿತು ಎಂಬ ಮತ್ತು 'ಎಂಡಿಪಿ' ಗಳ ನೀಡುವಿಕೆಯನ್ನು ನಿರ್ದೇಶಿಸುವ ಮುಂಚೆ ಅವನು ವಾಸ್ತವವಾಗಿ ಸಿಡಬ್ಲ್ಯೂ 21ರ ಜೊತೆ ಈ ವಿಷಯವನ್ನು ಚರ್ಚಿಸಿದ್ದನು ಎಂಬ ಅವನ ವಾದಕ್ಕೆ ಸಂಬಂಧಿಸಿ, ಅದು ಪ್ರಾರಂಭದಲ್ಲಿಯೇ ಏನನ್ನೂ ಒತ್ತಿ ಹೇಳಲಾಗದ ಪ್ರತಿವಾದದ ವಿಷಯವಾಗಿ ಕಂಡು ಬಂದಿರುತ್ತದೆ.

8. **ಈ ಮುಂದಿನ ನಿರ್ಣಯಗಳನ್ನು ನಾವು ಗಮನಿಸಿದ್ದೇವೆ:**

*"12. ಪ್ರತ್ಯಪೀಲುದಾರನ ವಿರುದ್ಧ ಈ ನ್ಯಾಯಾಲಯದ ಮುಂದೆ ಮಂಡಿಸಲಾದ ಸಾಕ್ಷ್ಯಾಧಾರಗಳಿಗೆ ದಿಲಾವರ್ ಬಾಲು ಕುರಾನೆ ಯವರ (ಮೇಲೆ ಹೇಳಿದ) ಪ್ರಕರಣ ಹಾಗೂ ಎಐಆರ್ 1979 ಎಸ್‌ಸಿ 366ರಲ್ಲಿ ವರದಿಯಾದ ಯೂನಿಯನ್ ಆಫ್ ಇಂಡಿಯಾ – ವಿರುದ್ಧ – ಪ್ರಫುಲ್ಲಕುಮಾರ್ ಸಮಯ್ ಹಾಗೂ ಇನ್ನೊಬ್ಬರು ಪ್ರಕರಣದಲ್ಲಿ ಒತ್ತಿ ಹೇಳಲಾದಂತೆ, (ಕೆಲ/ಕೇವಲ)ಸಂಶಯದ – ಗಂಭೀರ ಸಂಶಯದ – ಸೂತ್ರಗಳನ್ನು ಅನ್ವಯಿಸಿದ, ನಂತರವೂ ಸಹ ಸೂಜಿ ಮುಳ್ಳು ತೀವ್ರ ಸಂಶಯದ ಕಡೆಗೇ ವಾಲುತ್ತದೆ. ಈ ಪ್ರಕರಣದಲ್ಲಿ ಒಳಗೊಂಡಿರುವ ವಸ್ತು ವಿಷಯವು ರಾಷ್ಟ್ರದ ನೈಸರ್ಗಿಕ ಸಂಪನ್ಮೂಲವಾಗಿದೆ ಮತ್ತು ಆಪಾದಿಸಲಾದ ಅಪರಾಧವು ರಾಜ್ಯ ಬೊಕ್ಕಸಕ್ಕೆ ಗಣನೀಯವಾಗಿ ನಷ್ಟವನ್ನುಂಟು ಮಾಡಿದೆಯೆಂದು ಹೇಳಲಾಗಿದೆ. ಪ್ರತ್ಯಪೀಲುದಾರನು ರಾಜ್ಯದ ಜವಾಬ್ದಾರಿಯುತ ಅಧಿಕಾರಿಯಾಗಿದ್ದಾನೆ. ಈತನು ಉದ್ದೇಶಪೂರ್ವಕವಾಗಿ ಶಾಸನಬದ್ಧ ಉಪಬಂಧಗಳನ್ನು ಉಲ್ಲಂಘಿಸಿ ಆದೇಶವನ್ನು ಹೊರಡಿಸಿದ್ದಾನೆ.*

*13. ಪ್ರಶ್ನಿತ ಆದೇಶದಲ್ಲಿ ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು, ' ಅವನ ಕೃತ್ಯವು ಕ್ರಿಮಿನಲ್ ಬದ್ಧತೆಯಿಂದ ಅವನನ್ನು ಕಟ್ಟಿಹಾಕುವುದಿಲ್ಲ ಮತ್ತು ಸಾಕ್ಷಿದಾರರ*

*ಹೇಳಿಕೆಯು, ಅವನು ಕ್ರಿಮಿನಲ್ ಪಿತೂರಿಯನ್ನು ನಡೆಸಿದ್ದಾನೆಂದು ತೋರಿಸುವುದಿಲ್ಲವೆಂಬ ಬಹು ವಿಷಯಕ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅಲ್ಲಿ ನೇರ ಸಾಕ್ಷ್ಯವಿರದಿದ್ದರೂ, ಪ್ರಾಸಿಕ್ಯೂಷನ್ ಮಂಡಿಸಿದ ಸಾಂದರ್ಭಿಕ ಸಾಕ್ಷ್ಯದಲ್ಲಿ ಕಂಡುಬರುವ, ಅಪರಾಧದಲ್ಲಿ ಸಿಕ್ಕಿಸುವ ಸಾಕ್ಷ್ಯಾಧಾರಗಳು ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರ ಕಣ್ಣಿಗೆ ಬಿದ್ದಿಲ್ಲ. ಸಾಕ್ಷ್ಯವನ್ನು ಸೂಕ್ಷ್ಮವಾಗಿ ಪರಿಶೀಲಿಸಲು ಹಾಗೂ ವಿವೇಚಿಸಲು ಅಧಿವಿಚಾರಣಾ ನ್ಯಾಯಾಲಯದಲ್ಲಿ ನಿಹಿತವಾದ ಸೀಮಿತ ಅಧಿಕಾರವನ್ನು ಪ್ರಶ್ನಿತ ಆದೇಶದಲ್ಲಿ ಮಾನ್ಯ ವಿಚಾರಣಾ ನ್ಯಾಯಾಧೀಶರು ಉಲ್ಲಂಘಿಸಿದ್ದಾರೆ. ಹೀಗಾಗಿ, ಈ ಪುನರೀಕ್ಷಣಾ ಅಧಿಕಾರ ವ್ಯಾಪ್ತಿಯಲ್ಲಿ ಮಧ್ಯಪ್ರವೇಶವನ್ನು ಅಗತ್ಯಪಡಿಸುತ್ತದೆ".*

9. ತದನುಸಾರವಾಗಿ, ಅಪೀಲುದಾರನನ್ನು ಬಿಡುಗಡೆ ಮಾಡುವ ಸೆಷನ್ಸ್ ನ್ಯಾಯಾಧೀಶರ ಆದೇಶವನ್ನು ರದ್ದುಪಡಿಸಿ, ಈ ಅರ್ಜಿಯನ್ನು ಪುರಸ್ಕರಿಸಿತು.

10. ಅಪೀಲುದಾರನ ಪರ ಹಾಜರಾದ ಮಾನ್ಯ ಹಿರಿಯ ವಕೀಲರಾದ ಶ್ರೀ ಕಪಿಲ್ ಸಿಬಲ್ ರವರ ವಾದವನ್ನು ನಾವು ಆಲಿಸಿದ್ದೇವೆ. ಪ್ರತ್ಯಪೀಲುದಾರನ ಪರ ಹಾಜರಾದ ಮಾನ್ಯ ವಕೀಲರ ವಾದವನ್ನೂ ಸಹ ನಾವು ಆಲಿಸಿದ್ದೇವೆ.

11. ಅಪೀಲುದಾರನ ಪರ ಮಾನ್ಯ ವಕೀಲರಾದ ಶ್ರೀ ಕಪಿಲ್ ಸಿಬಲ್ ರವರು ಈ ಮುಂದಿನಂತೆ ನಿವೇದಿಸಿದ್ದಾರೆ:

1966ರ ವರ್ಷದಲ್ಲಿ ಗುತ್ತಿಗೆಯು ಮೂಲತಃ ಎಎಂಸಿ ಹೆಸರಿನಲ್ಲಿತ್ತು. ಆ ನಂತರ, ಸಂಸ್ಥೆಯು ಹಲವಾರು ಸಂದರ್ಭಗಳಲ್ಲಿ ಪುನರ್‌ರಚನೆಯಾಯಿತು. ಅನುಸರಿಸಲಾದ ಕಾರ್ಯಪ್ರಕ್ರಿಯೆಯು, ಪುನರ್‌ರಚನೆಯ ಬಗ್ಗೆ ನಿಯಮಗಳ ನಿಯಮ 62ರ ಅಡಿಯಲ್ಲಿ ಇಲಾಖೆಗೆ ತಿಳಿಸುವುದಾಗಿತ್ತು.

ನಿಯಮಗಳ ನಿಯಮ 37ನ್ನು ಅನ್ವಯಿಸಿರಲಿಲ್ಲ. ಅಪೀಲುದಾರನ ನಡೆಯು ಪ್ರಾಮಾಣಿಕವಾಗಿದ್ದ ಪ್ರಕರಣ ಇದಾಗಿದೆ. ಅಷ್ಟೇ ಅಲ್ಲದೆ, ನಿಯಮ 37 ಅನ್ವಯಿಸುತ್ತದೆಯೆಂಬುದರ ಆಧಾರದ ಮೇಲೆ ಮುಂದುವರೆದು, ಇದು ಅಪೀಲುದಾರನ ಮೇಲೆ ಕ್ರಿಮಿನಲ್ ಅಪರಾಧಗಳಿಗಾಗಿ ಕಾನೂನುಕ್ರಮ ಕೈಗೊಳ್ಳುವಂಥ ಪ್ರಕರಣವೇನಲ್ಲ ಎಂದು ಅವರು ನಿವೇದಿಸಿದ್ದಾರೆ. ಅಪೀಲುದಾರನು ಅಭ್ಯಾಸಬಲದ ಕಾರಣ ಆ ರೀತಿ ವರ್ತಿಸಿದ್ದಾನೆ. ಅವನು ಉಪ – ನಿರ್ದೇಶಕ (ಕಾನೂನು) ರನ್ನು ಸಂಪರ್ಕಿಸಿದ್ದಾನೆ.

12. ಸಂಸ್ಥೆಯ ಹೆಸರಿನಲ್ಲಿ 'ಎಂಡಿಪಿ' ಯನ್ನು ನೀಡತಕ್ಕದ್ದೆಂದು ತಾನು ನಿರ್ದೇಶಿಸಿದ್ದನೆಂಬುದು ಅಪೀಲುದಾರನ ವಾದವೂ ಸಹ ಅಗಿದೆ. ಪಾಲುದಾರರಿಗೆ ಪರ್ಮಿಟ್ಟನ್ನು ನೀಡಬಾರದೆಂದು ಸಹ ಅವನು ಸ್ಪಷ್ಟಪಡಿಸಿರುತ್ತಾನೆ. ದಾಖಲೆಯಲ್ಲಿ ಬೇರಾವುದೇ ಸಾಕ್ಷ್ಯಾಧಾರಗಳನ್ನು ಪ್ರಾಸಿಕ್ಯೂಷನ್ ಹಾಜರುಪಡಿಸಿರಲಿಲ್ಲ. ಇದು ಯಾವುದೇ ಕ್ರಿಮಿನಲ್ ಪಿತೂರಿಯನ್ನು ಸಾಬೀತುಪಡಿಸಲು ಸಾಕ್ಷ್ಯಾಧಾರಗಳಿರುವಂಥ ಪ್ರಕರಣವಲ್ಲ.

13. ಅದಕ್ಕೆ ವಿರೋಧವಾಗಿ, ಪ್ರತ್ಯಪೀಲುದಾರ – ಕೇಂದ್ರ ತನಿಖಾದಳ, ಬೆಂಗಳೂರು, ಪರ ಮಾನ್ಯ ವಕೀಲರು ಈ ಆದೇಶವನ್ನು ಸಮರ್ಥಿಸಿದ್ದಾರೆ. ಅದರಲ್ಲೂ ನಿರ್ದಿಷ್ಟವಾಗಿ, ಅಪೀಲುದಾರನ ನಿಲುವಿಗೆ ವಿರುದ್ಧವಾಗಿ ಅಪೀಲುದಾರನು ಅವನ ಕಾನೂನಾತ್ಮಕ ಅಭಿಪ್ರಾಯವನ್ನು ಕೋರಿರುವುದಿಲ್ಲವೆಂಬಷ್ಟರಮಟ್ಟಿಗೆ ಚಾರ್ಜ್ ವಿಟ್‌ನೆಸ್ ಸಿಡಬ್ಲ್ಯು 21ರ ನಿರ್ದಿಷ್ಟ ನಿಲುವಿನ ಮೇಲೆ ಅವಲಂಬಿಸಲಾಗಿದೆ.

**ಬಿಡುಗಡೆಯನ್ನು ಕೋರಿ ಅರ್ಜಿಯನ್ನು ಸಲ್ಲಿಸುವುದಕ್ಕೆ ಸಂಬಂಧಿಸಿ ಅನ್ವಯವಾಗುವ ಕಾನೂನು ನಿಯಮಗಳು**

14. ಇದು ತೀರ್ಪು ಜನ್ಯ ಕಾನೂನಿನ ಬಹುಭಾಗದಿಂದ ಆವೃತವಾದ ಕ್ಷೇತ್ರವಾಗಿದೆ. ನಾವು ಇತ್ತೀಚಿನ ತೀರ್ಪನ್ನು ಉಲ್ಲೇಖಿಸಿದ್ದು, ಅದು ಹಿಂದಿನ ತೀರ್ಪುಗಳನ್ನು ಎಂದರೆ, **ಪಿ. ವಿಜಯನ್ – ವಿರುದ್ಧ – ಕೇರಳ ರಾಜ್ಯ ಮತ್ತು ಇನ್ನೊಬ್ಬರು** ಪ್ರಕರಣದ ತೀರ್ಪನ್ನು ಉಲ್ಲೇಖಿಸಿದೆ ಹಾಗೂ ಈ ಮುಂದಿನ ನಿಯಮಗಳನ್ನು ವಿವೇಚಿಸಿದೆ:

i. ಎರಡು ಅಭಿಪ್ರಾಯಗಳು ಸಾಧ್ಯವಿದ್ದಲ್ಲಿ ಮತ್ತು ಅವುಗಳಲ್ಲಿ ಒಂದು ಗಂಭೀರ ಸಂಶಯಕ್ಕಿಂತ ವಿಭಿನ್ನವಾಗಿದ್ದರೆ ಮಾತ್ರ ಸಂಶಯಕ್ಕೆ ಎಡೆ ಮಾಡಿಕೊಟ್ಟಲ್ಲಿ, ಅಧಿವಿಚಾರಣಾ ನ್ಯಾಯಾಧೀಶರಿಗೆ ಆಪಾದಿತನನ್ನು ಬಿಡುಗಡೆ ಮಾಡಲು ಅಧಿಕಾರ ನೀಡಲಾಗಿರುತ್ತದೆ.

ii. ಪ್ರಾಸಿಕ್ಯೂಷನ್‌ನ ಸಂದರ್ಭದಲ್ಲಿ ಆರೋಪವನ್ನು ರೂಪಿಸಲು ಅಧಿವಿಚಾರಣಾ ನ್ಯಾಯಾಧೀಶರು ಕೇವಲ ಅಂಚೆ ಕಛೇರಿಯಲ್ಲ.

iii. ಮುಂದುವರೆಯಲು ಸಾಕಷ್ಟು ಆಧಾರವಿದೆಯೇ? ಅಥವಾ ಇಲ್ಲವೇ? ಎಂಬುದನ್ನು ಕಂಡುಹಿಡಿಯುವ ದೃಷ್ಟಿಯಿಂದ ನ್ಯಾಯಾಧೀಶರು ಸಾಕ್ಷ್ಯವನ್ನು ಮಾತ್ರ ಪರಿಶೋಧಿಸುತ್ತಾರೆ. ಸಾಕ್ಷ್ಯವು ಪೊಲೀಸರು ದಾಖಲಿಸಿದ ಹೇಳಿಕೆಗಳನ್ನು ಅಥವಾ ನ್ಯಾಯಾಲಯದ ಮುಂದೆ ಹಾಜರುಪಡಿಸಿದ ದಸ್ತಾವೇಜುಗಳನ್ನು ಒಳಗೊಂಡಿರುತ್ತದೆ.

iv. ಪಾಟೀಸವಾಲಿನಲ್ಲಿ ಪ್ರಶ್ನಿಸುವ ಮುಂಚೆ ಪೂರ್ಣವಾಗಿ ಅಂಗೀಕರಿಸಿದ್ದರೂ ಸಹ, ಆಪಾದಿತನ ತಪ್ಪನ್ನು ಸಾಬೀತುಪಡಿಸಲು ಪ್ರಾಸಿಕ್ಯೂಟರ್ ಸಾಕ್ಷ್ಯವನ್ನು ಮುಂದಿಡಲು ಸೂಚಿಸಿದಲ್ಲಿ ಅಥವಾ ಪ್ರತಿವಾದ ಸಾಕ್ಷ್ಯವನ್ನು ಖಂಡಿಸಿದಲ್ಲಿ, ಸಾಕ್ಷ್ಯ, ಯಾವುದಾದರೂ ಇದ್ದಲ್ಲಿ "ಆಪಾದಿತನು ಅಪರಾಧವನ್ನು ನಡೆಸಿದ್ದಾನೆಂದು

ತೋರಿಸದಿದ್ದಲ್ಲಿ, ಆಗ, ಅಧಿವಿಚಾರಣೆಯೊಂದಿಗೆ ಮುಂದುವರೆಯಲು ಸಾಕಷ್ಟು ಆಧಾರವಿರುವುದಿಲ್ಲ".

v. ತೀವ್ರ ಸಂಶಯಕ್ಕೆ ಕಾರಣವಾಗುವ ಸಾಕ್ಷ್ಯಾಧಾರಗಳನ್ನು ವಿವರಿಸಲು ಆಪಾದಿತನಿಗೆ ಮುಕ್ತ ಅವಕಾಶವಿದೆ.

vi. ನ್ಯಾಯಾಲಯವು ವ್ಯಾಪಕ ಸಂಭಾವ್ಯತೆಗಳನ್ನು, ಸಾಕ್ಷ್ಯದ ಪೂರ್ಣ ಪರಿಣಾಮವನ್ನು ಮತ್ತು ನ್ಯಾಯಾಲಯದ ಮುಂದೆ ಹಾಜರುಪಡಿಸಲಾದ ದಸ್ತಾವೇಜುಗಳನ್ನು, ಪ್ರಕರಣದಲ್ಲಿ ಕಂಡುಬರುವ ಯಾವುದೇ ಮೂಲಭೂತ ದೌರ್ಬಲ್ಯಗಳು ಹಾಗೂ ಇನ್ನು ಮುಂತಾದುವನ್ನು ಪರಿಗಣಿಸಬೇಕು. ಹಾಗಿದ್ದರೂ, ಇದು ಸಂಚಾರಿ ನ್ಯಾಯಿಕ ವಿಚಾರಣೆಯನ್ನು ಸಾಧಕ–ಬಾಧಕಗಳಾಗಿ ಮಾಡಲು ನ್ಯಾಯಾಲಯವನ್ನು ಅರ್ಹಗೊಳಿಸುವುದಿಲ್ಲ.

vii. ಆರೋಪಗಳನ್ನು ರೂಪಿಸುವ ಸಮಯದಲ್ಲಿ, ದಾಖಲೆಯಲ್ಲಿರುವ ಸಾಕ್ಷ್ಯಾಧಾರಗಳ ಪ್ರಮಾಣಾತ್ಮಕ ಮೌಲ್ಯವು ಅದರಲ್ಲಿ ಬರುವುದಿಲ್ಲ ಹಾಗೂ ಪ್ರಾಸಿಕ್ಯೂಷನ್‌ನಿಂದ ದಾಖಲೆಯಲ್ಲಿ ಪರಿಶೀಲನೆಗೆ ಬರುವ ಸಾಕ್ಷ್ಯಾಧಾರಗಳನ್ನು ಸತ್ಯವೆಂದು ಅಂಗೀಕರಿಸತಕ್ಕದ್ದು.

viii. ಆರೋಪವನ್ನು ಕ್ರಮಬದ್ಧವಾಗಿ ಬರೆಯುವುದಕ್ಕೆ ಮೂಲ ಆಧಾರವನ್ನು ರೂಪಿಸುವ ತೀವ್ರ ಸಂಶಯವನ್ನು ಒಪ್ಪುವ ಹಾಗೂ ಆಪಾದಿತನನ್ನು ಬಿಡುಗಡೆ ಮಾಡಲು ನಿರಾಕರಿಸುವ ಕೆಲವು ಸಾಕ್ಷ್ಯಾಧಾರಗಳು ಇರಲೇಬೇಕು.

15. 'ಸಿಆರ್‌ಪಿಸಿ'ಯ 227ನೇ ಪ್ರಕರಣದಡಿ ಆಪಾದಿತನು ತನ್ನನ್ನು ಬಿಡುಗಡೆ ಮಾಡಲು ಕೋರಿದಾಗ, ಆ ಹಂತದಲ್ಲಿ, ಆಪಾದಿತನ ಪ್ರತಿವಾದವನ್ನು ಪರಿಶೀಲಿಸತಕ್ಕದ್ದಲ್ಲ (**ಜಮ್ಮು ಮತ್ತು ಕಾಶ್ಮೀರ ರಾಜ್ಯ – ವಿರುದ್ಧ – ಸುದರ್ಶನ್ ಚಕ್ಕರ್ ಹಾಗೂ ಇನ್ನೊಬ್ಬರು**). 'ಸಿಆರ್‌ಪಿಸಿ'ಯ 227ನೇ ಪ್ರಕರಣದಲ್ಲಿ ಬಳಸಲಾದ **"ಪ್ರಕರಣದ ದಾಖಲೆ"** ಎಂಬ ಪದವನ್ನು ಪ್ರಾಸಿಕ್ಯೂಷನ್‌ನಿಂದ ಹಾಜರುಪಡಿಸಿದ ದಸ್ತಾವೇಜುಗಳು ಮತ್ತು ಅನುಚ್ಛೇದಗಳು ಎಂಬುದಾಗಿ ಅರ್ಥೈಸಿಕೊಳ್ಳತಕ್ಕದ್ದು. ಆರೋಪವನ್ನು ರೂಪಿಸುವ ಹಂತದಲ್ಲಿ ಯಾವುದೇ ದಸ್ತಾವೇಜನ್ನು ಹಾಜರುಪಡಿಸಲು ಆಪಾದಿತನಿಗೆ ಯಾವುದೇ ಹಕ್ಕನ್ನು ಸಂಹಿತೆಯು ನೀಡುವುದಿಲ್ಲ. ಆಪಾದನೆಯನ್ನು ರೂಪಿಸುವ ಹಂತದಲ್ಲಿ, ಆಪಾದಿತನ ಹೇಳಿಕೆಯು ಪೊಲೀಸರು ಹಾಜರುಪಡಿಸಿದ ಸಾಕ್ಷ್ಯಗಳಿಗೆ ಸೀಮಿತವಾಗಿರಬೇಕು. (**ಒರಿಸ್ಸಾ ರಾಜ್ಯ – ವಿರುದ್ಧ – ದೇಬೇಂದ್ರನಾಥ್ ಪಧಿ**).

**ಮೊಕದ್ದಮೆಯ ವಿಶ್ಲೇಷಣೆ:**

16. ಮೇಲೆ ಹೇಳಿದಂತೆ, ಕಾನೂನು ತತ್ವಗಳನ್ನು ರೂಪಿಸುವುದರ ಜತೆಗೆ ಸತ್ಯಾಂಶಗಳನ್ನು ಪರಿಗಣಿಸೋಣ:

ಅಪೀಲುದಾರನು ನಿಸ್ಸಂದೇಹವಾಗಿ ದಿನಾಂಕ: 09.06.2008ರ ಅಧಿಸೂಚನೆಯ ಕಾರಣದಿಂದಾಗಿ ಕರ್ನಾಟಕ ರಾಜ್ಯದ ಗಣಿ ಮತ್ತು ಭೂ ವಿಜ್ಞಾನದ ನಿರ್ದೇಶಕರಾಗಿ ನೇಮಕಗೊಂಡಿದ್ದಾರೆ. ಅವರು ಸದರಿ ಹುದ್ದೆಯಲ್ಲಿ ದಿನಾಂಕ: 25.10.2010ರವರೆಗೂ ಮುಂದುವರೆಯುತ್ತಾರೆ. ಗಣಿ ಗುತ್ತಿಗೆ ಸಂಖ್ಯೆ: 625ನ್ನು ಆಡಳಿತ ನಡೆಸುವವರ ಮತ್ತು ನೋಂದಣಿಯಾದ ವ್ಯಾಪಾರ ಸಂಸ್ಥೆಯಾದ ಎಎಂಸಿ ಮಧ್ಯೆ ದಿನಾಂಕ: 02.03.1966 ರಂದು ಕಾರ್ಯಗತಗೊಳಿಸಲಾಯಿತು. ವ್ಯವಸ್ಥಾಪಕ ಪಾಲುದಾರನು ಶ್ರೀ ಜಾಲಿ ಮಹದೇವಪ್ಪ ಎಎಂಸಿ ಯ ಪಾಲುದಾರರು ಎಂದರೆ, ಶ್ರೀ ಕೆ.ಎಂ. ಪಾರ್ವತಮ್ಮ ಮತ್ತು ಶ್ರೀ ಕೆ.ಎಂ. ವಿಶ್ವನಾಥ್‌ರವರು ದಿನಾಂಕ: 26.12.2009ರ ಪತ್ರವನ್ನು ಕಳುಹಿಸಿದ್ದಾರೆ. ಅದು ಈ ಕೆಳಕಂಡಂತಿದೆ:

ಗೆ:

ನಿರ್ದೇಶಕರು,
ಗಣಿ ಮತ್ತು ಭೂ ವಿಜ್ಞಾನ ಇಲಾಖೆ,
ಖನಿಜ ಭವನ,
ರೇಸ್ ಕೋರ್ಸ್‌ರಸ್ತೆ,
**ಬೆಂಗಳೂರು.**

**ವಿಷಯ:** ಅಸೋಸಿಯೇಟೆಡ್ ಮೈನಿಂಗ್ ಕಂಪನಿ ಎಂಎಲ್ ಸಂಖ್ಯೆ: 2434 ರಚನೆಯಲ್ಲಿ ಬದಲಾವಣೆ ಕುರಿತು.

ಮಾನ್ಯರೆ,

ಎಂಎಲ್ ಸಂಖ್ಯೆ: 2434ನ್ನು (ಹಳೆಯ ಸಂಖ್ಯೆ 625) ಹೊಂದಿರುವ, ಕೆಳಗೆ ಸಹಿ ಮಾಡಿರುವ ನಾವು, ಬಳ್ಳಾರಿ ಜಿಲ್ಲೆಯಲ್ಲಿರುವ ಸಂಡೂರು ತಾಲೂಕಿನ ವೆಂಕಟಗಿರಿ ಗ್ರಾಮದ ಗುರು ಐರನ್ ಓರ್ ಮೈನ್ಸ್ ನ ಅಸೋಸಿಯೇಟೆಡ್ ಮೈನಿಂಗ್ ಕಂಪನಿಯ ಗುತ್ತಿಗೆ ಮಾಲೀಕರಾಗಿರುತ್ತೇವೆ.

2009ರ ಜುಲೈ 31ರಲ್ಲಿ, 123/350 ವೀರಬಗೌಡ ಕಾಲೋನಿ, ಕುಮಾರಸ್ವಾಮಿ ದೇವಸ್ಥಾನದ ಕ್ಲಬ್ ರಸ್ತೆಯ ಎದುರು, ಬಳ್ಳಾರಿ–ವಿಳಾಸದ ಶ್ರೀ ಜಿ. ಜನಾರ್ಧನ ರೆಡ್ಡಿ ಮತ್ತು ಶ್ರೀಮತಿ ಜಿ. ಲಕ್ಷ್ಮಿ ಅರುಣ ಎಂಬುವವರನ್ನು ಪಾಲುದಾರರನ್ನಾಗಿ ನಾವು ನೇಮಿಸಿಕೊಂಡಿದ್ದೆವು. ತರುವಾಯ 2009ರ ಆಗಸ್ಟ್ 1 ರಂದು ಶ್ರೀಮತಿ ಕೆ.ಎಂ. ಪಾರ್ವತಮ್ಮ ಮತ್ತು ಶ್ರೀ ಕೆ.ಎಂ. ವಿಶ್ವನಾಥ್ ನಿವೃತ್ತಿ ಹೊಂದಿರುತ್ತಾರೆ.

ಶ್ರೀ ಜಿ. ಜನಾರ್ಧನರೆಡ್ಡಿ ಮತ್ತು ಶ್ರೀಮತಿ ಜಿ. ಲಕ್ಷ್ಮಿ ಅರುಣರವರು ಗಣಿ ಸಂಸ್ಥೆಯ ಏಕಮಾತ್ರ ಪಾಲುದಾರರಾಗಿರುತ್ತಾರೆ. ಪ್ರವೇಶಾತಿ ಮತ್ತು ನಿವೃತ್ತಿ ಕರಾರನ್ನು ತಮ್ಮ ಅವಗಾಹನೆಗಾಗಿ ಮತ್ತು ತಮ್ಮ ಮಾಹಿತಿಗಾಗಿ ಇದರೊಂದಿಗೆ ಲಗತ್ತಿಸಲಾಗಿದೆ.

ಗಣಿಗಳಿಂದ ಅದಿರನ್ನು ವಿವಿಧ ಸ್ಥಳಗಳಿಗೆ ಸಾಗಣೆ ಮಾಡಲು ದಯವಿಟ್ಟು ಅನುಮತಿ ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಧನ್ಯವಾದಗಳು,

ತಮ್ಮ ವಿಶ್ವಾಸಿ,

ಸಹಿ/–
ಶ್ರೀಮತಿ ಕೆ. ಪಾರ್ವತಮ್ಮ

ಸಹಿ/–
ಶ್ರೀ ಕೆ.ಎಂ. ವಿಶ್ವನಾಥ್

17. ಅಪೀಲುದಾರನಿಗೆ ವಹಿಸಬಹುದಾದ ಪಾತ್ರವು ಪ್ರಮುಖವಾಗಿ ಈ ಪತ್ರದಿಂದ ಪ್ರಾರಂಭವಾಗುತ್ತದೆ. ನಿಯಮಗಳ ನಿಯಮ 37ಕ್ಕೆ ಸಂಬಂಧಪಟ್ಟಂತೆ, ಸಂಸ್ಥೆಯ ಪುನರ್‌ರಚನೆಯ ಮೇಲೆ ಕೆಲಸ ಮಾಡುವ ಮೊದಲು ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿ ಪಡೆಯುವುದು ಅಪೀಲುದಾರನ ಜವಾಬ್ದಾರಿಯಾಗಿರುತ್ತದೆ. ಸಿ.ಡಬ್ಲ್ಯೂ.24 ಡಿ. ಹನುಮಂತರವರು ನಿಸ್ಸಂದೇಹವಾಗಿ, ಮೇಲೆ ಹೇಳಲಾದ ಪತ್ರವನ್ನು ಅದೇ ಪ್ರಕ್ರಿಯೆಗಾಗಿ ಅವರಿಗೆ ಗುರುತಿಸಲಾಗಿತ್ತು ಎಂಬುದನ್ನು ಸೂಚಿಸುವ ಹೇಳಿಕೆಯನ್ನು ನೀಡಿದ್ದಾರೆ. ಅವರು ಮುಂದುವರೆದು, ಕಾನೂನು ಸಲಹೆಯನ್ನು ಪಡೆದುಕೊಳ್ಳಬಹುದೆಂದು ಪ್ರಸ್ತಾಪಿಸಿರುತ್ತಾರೆ ಎಂದು ಹೇಳಿದ್ದಾರೆ. ಕೊನೆಯ ಹಂತದಲ್ಲಿ, ಅದನ್ನು ಹೆಚ್ಚುವರಿ ನಿರ್ದೇಶಕರಿಗೆ ಸಲ್ಲಿಸಲಾಯಿತು. ಹೆಚ್ಚುವರಿ ನಿರ್ದೇಶಕರೂ ಕೂಡ ಕಾನೂನು ಸಲಹೆಯನ್ನು ಪಡೆದುಕೊಳ್ಳುವ ಅವಶ್ಯಕತೆಯನ್ನು ಶಿಫಾರಸ್ಸು ಮಾಡಿದರು. ದಿನಾಂಕ: 04.01.2010ರಂದು ಈ ವಿಷಯವು ಅಪೀಲುದಾರರ ಮುಂದೆ ಬಂದಿತು. ದಿನಾಂಕ: 04.01.2010ರಂದು ಅಪೀಲುದಾರರು ಆದೇಶ ಮಾಡಿದ್ದಾರೆಂದು ಕಂಡು ಬಂದಿರುತ್ತದೆ:

> "ಉಪ ನಿರ್ದೇಶಕರು (ಕಾನೂನು) ರವರೊಂದಿಗೆ ಮಾತನಾಡಿದ್ದೇವೆ, ಸಂಸ್ಥೆಯು ಹಾಗೆಯೇ ಉಳಿಯುತ್ತದೆ, ಅದರಲ್ಲಿ ಪಾಲುದಾರರನ್ನು ಸೇರಿಸಿಕೊಂಡಿರಬಹುದು ಅಥವಾ ತೆಗೆದುಹಾಕಿರಬಹುದು ಮತ್ತು ಇದಕ್ಕಾಗಿ ಅವರು ಕಾನೂನು ಮಂಡಳಿಯನ್ನು ಸಂಪರ್ಕಿಸಬೇಕಾಗುತ್ತದೆ. ಪ್ರಸ್ತುತ ಮೊಕದ್ದಮೆಯಲ್ಲಿ, ಪಾಲುದಾರರು ಅವರ ಹೆಸರಿನಲ್ಲಿ ಎಂಡಿಪಿ (ಖನಿಜ ರವಾನೆ ಅನುಮತಿ)ಯನ್ನು ಕೇಳುತ್ತಿಲ್ಲ. ಆದರೆ, ಅವರು ಕಂಪನಿಯ ಹೆಸರಿನಲ್ಲಿ ಕೇಳುತ್ತಿದ್ದಾರೆ. ಅನುಮತಿಯನ್ನು ಕೇವಲ ಕಂಪನಿಯ ಎಂದರೆ ಎಎಂಸಿ ಕಂಪನಿಯ ಹೆಸರಿನಲ್ಲಿ ನೀಡಬಹುದಾಗಿದ್ದು, ಗುತ್ತಿಗೆಯನ್ನು ಸಹ ಇದೇ ಕಂಪನಿಗೆ

ಮಂಜೂರು ಮಾಡಬಹುದು. ಪಾಲುದಾರರು ಬದಲಾಗಿದ್ದಾರೆ, ಆದರೆ ಎಂಡಿಪಿಗಳನ್ನು ನೀವು ಪಾಲುದಾರರಿಗೆ ನೀಡುತ್ತಿಲ್ಲ. ಆದ್ದರಿಂದ, ಹೊಸಪೇಟೆಯ ಡಿ.ಡಿ. ರವರಿಗೆ ಎಂಡಿಪಿಗಳನ್ನು ಕಂಪನಿಯ ಹೆಸರಿನಲ್ಲಿ ಮಾತ್ರ ನೀಡಬಹುದು ಎಂದು ತಿಳಿಸಬೇಕಾಗುತ್ತದೆ".

18. ಹೆಚ್ಚುವರಿ ನಿರ್ದೇಶಕರು ಕೂಡ ಇದೇ ವಿಷಯವನ್ನು ಮಾತನಾಡಿದ್ದಾರೆ.

19. ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಿರುವ ಪ್ರಾಸಿಕ್ಯೂಷನ್‌ನ ವಾದವು, ಅಪೀಲುದಾರನು ದಿನಾಂಕ: 5.1.2010ರಂದು ಅಂತಿಮವಾಗಿದ್ದ ತನ್ನ ಆದೇಶ ದಿನಾಂಕ: 4.1.2010 (ಕರಡು) ರಲ್ಲಿ ಉಪನಿರ್ದೇಶಕ (ಕಾನೂನು) ರವರೊಂದಿಗೆ ಮಾತನಾಡಿ, ಕಾನೂನು ಅಭಿಪ್ರಾಯವನ್ನು ಪಡೆದಿರುವ ಬಗ್ಗೆ ಹೇಳಿದ್ದಾನೆ ಎಂಬ ಸಂಗತಿಯ ಮೇಲೆ ಅವಶ್ಯವಾಗಿ ಆಧಾರಪಟ್ಟಿದ್ದು, ಉಪನಿರ್ದೇಶಕ (ಕಾನೂನು)ರವರು, ತಾನು ಅಂಥ ಯಾವುದೇ ಅಭಿಪ್ರಾಯವನ್ನು ನೀಡಿಲ್ಲವೆಂಬ ನಿಲವನ್ನು ಹೊಂದಿದ್ದಾರೆ. ಉಪನಿರ್ದೇಶಕ (ಕಾನೂನು)ರವರ ಹೇಳಿಕೆಯನ್ನು ಕ್ರಿಮಿನಲ್ ಸಂಕೀರ್ಣ ಅರ್ಜಿ ಸಂಖ್ಯೆ: 122009/2009ರೊಂದಿಗೆ ಅಪೀಲುದಾರನಿಂದ ಹಾಜರುಪಡಿಸಲಾಗಿದೆ. ಅವರು ಇತರ ವಿಷಯಗಳೊಂದಿಗೆ, ಈ ಮುಂದಿನಂತೆ ಹೇಳಿಕೆ ನೀಡಿದ್ದಾರೆ:

> "ಹಾಗಿದ್ದರೂ, ಈ ಸಂಬಂಧ ಯಾವುದೇ ಅಭಿಪ್ರಾಯವನ್ನು ನನ್ನಿಂದ ಕೋರಲಾಗಿಲ್ಲ". ಅಷ್ಟೇ ಅಲ್ಲದೆ ಅವರು ದಿನಾಂಕ: 26.12.2009ರ ಪತ್ರದ ಒಳಾಂಶಗಳು, ಸಂಪೂರ್ಣ ಗುತ್ತಿಗೆ ಹಿಡುವಳಿ ಹಕ್ಕುಗಳನ್ನು ಮೊದಲನೇ ಮತ್ತು ಎರಡನೇ ಆಪಾದಿತರ ಹೆಸರಿಗೆ ವರ್ಗಾಯಿಸಲಾಯಿತು ಎಂಬುದನ್ನು ಬಹಿರಂಗಪಡಿಸಿವೆ. ಇದು ನಿಯಮಾವಳಿಗಳ ನಿಯಮ 37ಕ್ಕೆ ವಿರುದ್ಧವಾಗಿದೆ ಎಂದು ಹೇಳಿಕೆ ನೀಡಿದ್ದಾರೆ. ಹಾಗಿದ್ದರೂ ನಿಯಮ 37ರ ಉಪಬಂಧಗಳನ್ನು ನಿರ್ಲಕ್ಷಿಸಿ, ಕಂಪನಿಯ ಹೆಸರಿನಲ್ಲಿ 'ಎಂಡಿಪಿ' ಗಳನ್ನು ನೀಡುವಂತೆ ಉಪ ನಿರ್ದೇಶಕರಿಗೆ ನಿರ್ದೇಶನ ನೀಡಲಾಯಿತು. ಆದಾಗ್ಯೂ ಅವರು ಮುಂದುವರೆದು,

ಎಎಂಸಿ ಒಂದು ಫರ್ಮಾಗಿದೆಯೇ ಹೊರತು ಕಂಪನಿಯಲ್ಲ ಎಂದು ಹೇಳಿದ್ದಾರೆ. ಅದಲ್ಲದೆ, ಗುತ್ತಿಗೆದಾರನ ಹಕ್ಕುಗಳಲ್ಲಿ ಯಾವುದೇ ಬದಲಾವಣೆಯಿಲ್ಲದಿದ್ದಲ್ಲಿ, ಆಗ, ಗುತ್ತಿಗೆ ಹಿಡುವಳಿ ಹಕ್ಕುಗಳ ಮೇಲೆ ಬೇರೆ ಯಾರಾದರೂ ಹಕ್ಕುಗಳನ್ನು ಪಡೆಯುತ್ತಾರೆಂದು ಅವರು ಹೇಳಿದ್ದಾರೆ. ಸದರಿ ಕಾರ್ಯಕ್ಕೆ ನಿಯಮಗಳ ನಿಯಮ 37ರ ಉಪಬಂಧಗಳು ಅನ್ವಯಿಸುತ್ತವೆ. ಅಷ್ಟೇ ಅಲ್ಲದೆ, ಗಣಿ ಗುತ್ತಿಗೆಯು ದಿನಾಂಕ: 01.03.1996ರಂದು ಮುಕ್ತಾಯಗೊಳ್ಳಲು ಬಾಕಿ ಇತ್ತು ಎಂಬ ಸಂಗತಿಯ ದೃಷ್ಟಿಯಿಂದ 29.07.1994ರಂದು ಅರ್ಜಿಯನ್ನು ಸಲ್ಲಿಸಲಾಗಿದ್ದರೂ, ಅರಣ್ಯ ಇಲಾಖೆಯು ಅನುಮತಿ ನೀಡಿದೆಯೆಂಬ ಕಾರಣದಿಂದ ಗುತ್ತಿಗೆಯು ಸಚಿವರಿಂದ 2000ದ ಇಸವಿಯಿಂದ 2010ನೇ ಇಸವಿಯವರೆಗೆ ನವೀಕರಿಸಲ್ಪಟ್ಟಿದೆ ಎಂದು ಸಹ ಹೇಳಿಕೆ ನೀಡಿದ್ದಾರೆ. ಗುತ್ತಿಗೆಯನ್ನು ದಿನಾಂಕ: 02.03.1996ರಿಂದ ಜಾರಿಗೆ ಬರುವಂತೆ ಹತ್ತು ವರ್ಷಗಳ ಅವಧಿಗಾಗಿ ನವೀಕರಿಸಲೇಬೇಕಿರುತ್ತದೆಂದು ಅವರು ಹೇಳುತ್ತಿದ್ದರು.

20. 1960ರಲ್ಲಿ ಮಾಡಲಾಗಿದ್ದಂಥ ನಿಯಮಗಳ 37ನೇ ನಿಯಮವನ್ನು ಗಮನಿಸುವ ಅಗತ್ಯವಿದೆ. 37ನೇ ನಿಯಮವನ್ನು ಇತರ ವಿಷಯಗಳೊಂದಿಗೆ ಈ ಮುಂದಿನಂತೆ ಓದಲಾಗಿದೆ:

**"37. ಗುತ್ತಿಗೆಯ ವರ್ಗಾವಣೆ:–** (1) <u>ಗುತ್ತಿಗೆದಾರನು, ಲಿಖಿತದಲ್ಲಿ ರಾಜ್ಯ ಸರ್ಕಾರದ ಪೂರ್ವ ಸಮ್ಮತಿಯಿಲ್ಲದೆ</u> ಮತ್ತು ಕೇಂದ್ರ ಸರ್ಕಾರದ ಪೂರ್ವಾನುಮೋದನೆಯಿಲ್ಲದೆ, ಅಧಿನಿಯಮದ ಒಂದನೇ ಅನುಸೂಚಿಯ ಭಾಗ 'ಎ' ಹಾಗೂ 'ಬಿ' ಯಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ಖನಿಜದ ಸಂಬಂಧದಲ್ಲಿ ಗಣಿ ಗುತ್ತಿಗೆಯ ವಿಷಯದಲ್ಲಿ:–

(ಎ) ಗಣಿ ಗುತ್ತಿಗೆಯ ಅಥವಾ ಅದರಲ್ಲಿನ ಯಾವುದೇ ಹಕ್ಕು, ಸ್ವಾಮ್ಯ ಅಥವಾ ಹಿತಾಸಕ್ತಿಯನ್ನು ಹಸ್ತಾಂತರ, ಒಳಗುತ್ತಿಗೆ, ಅಡಮಾನ ಅಥವಾ ಇತರ ಯಾವುದೇ ರೀತಿಯಲ್ಲಿ ವರ್ಗಾಯಿಸತಕ್ಕದ್ದಲ್ಲ.

(ಬಿ) ಗುತ್ತಿಗೆದಾರನನ್ನು ಹೊರತುಪಡಿಸಿ, ಯಾರೇ ವ್ಯಕ್ತಿಯಿಂದ ಅಥವಾ ಸಂಸ್ಥೆಯಿಂದ ಗುತ್ತಿಗೆದಾರನ ಕಾರ್ಯನಿರ್ವಹಣೆ ಅಥವಾ ಜವಾಬ್ದಾರಿಗಳು, ಗಣನೀಯವಾಗಿ ನಿಯಂತ್ರಿಸಲ್ಪಡುವ ಅಥವಾ ನಿಯಂತ್ರಿಸಲ್ಪಡಬಹುದಾದ ಗಮನಾರ್ಹಮಟ್ಟಕ್ಕೆ ನೇರವಾಗಿ ಅಥವಾ ಪರೋಕ್ಷವಾಗಿ ಗುತ್ತಿಗೆದಾರನಿಗೆ ಹಣಸಹಾಯ ಮಾಡುವ ಅಥವಾ ಮಾಡಬಹುದಾದ ಯಾವುದೇ ಪ್ರಾಮಾಣಿಕ ವ್ಯವಸ್ಥೆ, ಕರಾರು ಅಥವಾ ಒಪ್ಪಂದವನ್ನು ಮಾಡಿಕೊಳ್ಳತಕ್ಕದ್ದಲ್ಲ.

(ಒತ್ತು ನೀಡಲಾಗಿದೆ)

21. ಅಧಿವಿಚಾರಣಾ ನ್ಯಾಯಾಲಯವು **ಶ್ರೀ ರಾಮಕೃಷ್ಣ ಮೈನಿಂಗ್ ಕಂಪನಿ** (ಮೇಲೆ ಹೇಳಿದ) ಪ್ರಕರಣದಲ್ಲಿ ಮೈಸೂರು ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ತೀರ್ಪಿನ ಮೇಲೆ ಅವಲಂಬಿಸಿದೆ. ವಾಸ್ತವವಾಗಿ ಸದರಿ ಪ್ರಕರಣದಲ್ಲಿ ಈ ನ್ಯಾಯಾಲಯವು ಖನಿಜ ರಿಯಾಯಿತಿ ನಿಯಮಗಳು, 1949ರ 37ನೇ ನಿಯಮವನ್ನು ಪರಿಗಣಿಸಿದ್ದು, ಅದನ್ನು ಈ ಮುಂದಿನಂತೆ ಓದಲಾಗಿದೆ:

**"37. ಗುತ್ತಿಗೆಯ ವರ್ಗಾವಣೆ:–** ಗುತ್ತಿಗೆದಾರನು ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಮತ್ತು ನಿಯಮ 35ಕ್ಕೆ ಕೊಡಲಾದ ಮೊದಲ ಪರಂತುಕದಲ್ಲಿ ಹಾಗೂ ನಿಯಮ 38ರಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳಿಗೆ ಒಳಪಟ್ಟು, ತನ್ನ ಗುತ್ತಿಗೆಯನ್ನು ಅಥವಾ ಯಾವುದೇ ಹಕ್ಕನ್ನು ಸ್ವಾಮ್ಯವನ್ನು ಅಥವಾ ಹಿತಾಸಕ್ತಿಯನ್ನು ರಾಜ್ಯ ಸರ್ಕಾರಕ್ಕೆ

100.00ರೂ.ಗಳ ಶುಲ್ಕವು ಸಂದಾಯವಾದ ಒಪ್ಪಿಗೆಯ ಪ್ರಮಾಣಪತ್ರವನ್ನು ಹೊಂದಿರುವ ವ್ಯಕ್ತಿಗೆ ವರ್ಗಾಯಿಸಬಹುದು".

(ಒತ್ತು ನೀಡಲಾಗಿದೆ)

22. 1960ಕ್ಕೂ ಮೊದಲೇ ಎಂದರೆ ಯಾವಾಗ ನಿಯಮಗಳನ್ನು ರಚಿಸಲಾಗಿತ್ತೋ ಆಗ ಪಡೆದುಕೊಂಡಂತೆ, ಉಪಬಂಧವು ಬೇರೆಯದಾಗಿತ್ತು ಎಂಬುದು ಸ್ಪಷ್ಟವಾಗಿದೆ.

23. ಮೇಲೆ ಹೇಳಲಾದ ಮೊಕದ್ದಮೆಯಲ್ಲಿ ಆದಾಯ ತೆರಿಗೆ ಅಧಿನಿಯಮ, 1922ರ 66ನೇ ಪ್ರಕರಣದಡಿ ಉಲ್ಲೇಖದಲ್ಲಿರುವ ಪ್ರಶ್ನೆಯನ್ನು ನಿರ್ಣಯಿಸಲಾಗಿದೆ. ನಿರ್ಣಯಕ್ಕೆ ಬಂದಿರುವಂತಹ ಪ್ರಶ್ನೆಗಳಲ್ಲಿನ ಒಂದು ಪ್ರಶ್ನೆಯು, ಗುತ್ತಿಗೆಯನ್ನು ವರ್ಗಾಯಿಸುವುದನ್ನು ನಿಯಮ 37ರಡಿ ಸರ್ಕಾರದ ಪೂರ್ವ ಮಂಜೂರಾತಿಯನ್ನು ಪಡೆಯದ ಪರಿಣಾಮದಿಂದಾಗಿ ಉದ್ಭವಿಸಿದೆ. ನ್ಯಾಯಾಲಯವು **ಶ್ರೀ ರಾಮಕೃಷ್ಣ ಮೈನಿಂಗ್ ಕಂಪನಿ** (ಮೇಲೆ ಹೇಳಿದ) ಪ್ರಕರಣದಲ್ಲಿ ಇತರ ವಿಷಯಗಳ ಜೊತೆಗೆ ಈ ಮುಂದಿನಂತೆ ನಿರ್ಣಯಿಸಿರುವುದನ್ನು ನಾವು ಗಮನಿಸಬಹುದಾಗಿದೆ.

> "ನಿಯಮ 37, ಅದರ ಭಾಷೆಯಲ್ಲಿ ಕಂಡು ಬಂದಿರುವಂತೆ ನಮ್ಮ ಮುಂದಿರುವಂಥ ಪಾಲುದಾರಿಕೆಯ ರಚನೆಯ ಜೊತೆಗೆ ಅದು ತನ್ನನ್ನು ಪರಿಗಣಿಸದಿರುವುದು ಕಂಡುಬರುವುದು ಮತ್ತು, ಅದರ ಪ್ರಮುಖ ಉದ್ದೇಶವು ನಿಯಮಗಳ ಉಪಬಂಧಗಳಡಿ ಮಂಜೂರು ಮಾಡಲಾದ ಗುತ್ತಿಗೆಯ ವರ್ಗಾವಣೆಯನ್ನು ಒದಗಿಸುವುದಾಗಿದೆ. ಅದು ಒಪ್ಪಿಗೆಯ ಪ್ರಮಾಣಪತ್ರವನ್ನು ಹೊಂದಿರುವ ವ್ಯಕ್ತಿಗೆ ಗುತ್ತಿಗೆದಾರನಿಂದ ವರ್ಗಾವಣೆಯನ್ನು ಅಧಿಕೃತಗೊಳಿಸುವ ಉಪಬಂಧವನ್ನು ಸಾಧ್ಯಗೊಳಿಸುವ ಸ್ವರೂಪದ್ದಾಗಿದೆ ಮತ್ತು ನಮಗೆ ಸಂಬಂಧಿಸಿರದಂಥ ಇತರ ಷರತ್ತುಗಳಿಗೊಳಪಟ್ಟು, ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಅಂಥ ವರ್ಗಾವಣೆಯನ್ನು ಮಾಡಲಾಗುವುದೆಂದು ನಿರ್ದೇಶಿಸುತ್ತದೆ. ನಿರ್ದಿಷ್ಟ ಕಾರ್ಯದ ನಿರ್ವಹಣೆಯ ವಿರುದ್ಧ ವ್ಯಕ್ತ ನಿಷೇಧವನ್ನು ಒಳಗೊಳ್ಳುವ ಶಾಸನಬದ್ಧ ಉಪಬಂಧಕ್ಕೂ ಹಾಗೂ ನಿಗದಿತ ಷರತ್ತುಗಳಿಗೊಳಪಟ್ಟು ತನ್ನ ಕಾರ್ಯನಿರ್ವಹಣೆಯನ್ನು

ಸಾಧ್ಯಗೊಳಿಸುವಂಥದಕ್ಕೂ ನಡುವೆ ಭಿನ್ನತೆಯಿದೆ. ಮೊದಲನೆಯದರೆ ಸಂದರ್ಭದಲ್ಲಿ, ಕಾರ್ಯದ ನಿರ್ವಹಣೆಯ ವಿರುದ್ಧ ಖಚಿತ ನಿಷೇಧವನ್ನು, ಕಾನೂನಿನಿಂದ ನಿಷೇಧಿಸಲಾಗಿದೆ ಎಂಬುದನ್ನು ಬಿಟ್ಟು ಬೇರೇನನ್ನೂ ಹೇಳಲಾಗದ ತೀರ್ಮಾನಕ್ಕೆ ಬರುವುದಕ್ಕೆ ಏನೂ ತೊಂದರೆಯಿಲ್ಲ, ಇದೇ ವಿಷಯವು ಎರಡನೇ ಪ್ರವರ್ಗದಲ್ಲಿ ಬಂದರೆ, ಅದೇ ರೀತಿ ಹೇಳಲಾಗದು. ಈಗ 37ನೇ ನಿಯಮವು ವ್ಯಕ್ತಪದಗಳಲ್ಲಿ ವರ್ಗಾವಣೆಯನ್ನು ನಿಷೇಧಗೊಳಿಸುವುದಿಲ್ಲ. ಆದರೆ, ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಹಾಗೂ ಇತರ ಷರತ್ತುಗಳಿಗೊಳಪಟ್ಟು, ವರ್ಗಾವಣೆಯನ್ನು ಅಧಿಕೃತಗೊಳಿಸುತ್ತದೆ".

24. ನಿಯಮವು 37ರಲ್ಲಿನ ಉಪಬಂಧಗಳು, ಅದು 2009ನೇ ವರ್ಷದಲ್ಲಿ ಪಡೆದುಕೊಂಡಿದ್ದರಿಂದ ಈ ಪ್ರಕರಣದ ಅಂತ್ಯವನ್ನು ನಿಯಂತ್ರಿಸಿರುತ್ತವೆ. ಸ್ಟ್ಯಾಂಪು ಅಧಿನಿಯಮದ ಅಡಿಯಲ್ಲಿ ನೀಡಿದ ತೀರ್ಪುಗಳು ನಿಯಮಗಳ 37ನೇ ನಿಯಮದ ವ್ಯಾಪ್ತಿಯನ್ನು ಅರ್ಥಮಾಡಿಕೊಳ್ಳಲು ಪ್ರಸಕ್ತವಾಗಿಲ್ಲದಿರಬಹುದು ಎಂದು ಸಹ ವಾದಿಸದಿರಬಹುದು. ಎಎಂಸಿ ಕಂಪೆನಿಗೆ ಸಂಬಂಧಿಸಿದಂತೆ ಏರ್ಪಟ್ಟ ಹಲವಾರು ಪುನರ್‌ರಚನೆಗಳನ್ನು ಕುರಿತಂತೆ ಅಪೀಲುದಾರನಿಗೆ ಒಂದು ಮೊಕದ್ದಮೆಯಿದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ ಮತ್ತು ಯಾವುದೇ ಸಂದರ್ಭದಲ್ಲೂ ನಿಯಮ 37ರ ಅತಿಕ್ರಮಣಕ್ಕೆ ಸಂಬಂಧಿಸಿದ ಅಂಶವು ಉದ್ಭವಿಸಿರಲಿಲ್ಲ. ಅರ್ಜಿದಾರನು ಮಾಡಿದ ಒಂದೇ ಒಂದು ಕಾರ್ಯವೆಂದರೆ, ಇಲಾಖೆಯಲ್ಲಿ ಪಡೆಯುವ ರೂಢಿಯ ಪ್ರಕಾರವಾಗಿಯೇ ವರ್ತಿಸಿರುವನು. ನಿಯಮ 37ಕ್ಕೆ ಸಂಬಂಧಿಸಿದಂತೆ ಹೆಚ್ಚುವರಿ ನಿರ್ದೇಶಕರಾಗಲಿ ಅಥವಾ ಎಸ್‌ಡಿಎ ಆಗಲಿ ಸರಿಯಾಗಿ ಪ್ರಶ್ನಿಸಿಲ್ಲವಾದ್ದರಿಂದ ಅಪೀಲುದಾರನು ಈ ಮೊಕದ್ದಮೆಯನ್ನು ಹೂಡುವ ಅವಕಾಶವಿದೆ.

25. 'ಸಿಆರ್‌ಪಿಸಿ' ಯ 227ನೇ ಪ್ರಕರಣದಡಿ ಅಧಿಕಾರವ್ಯಾಪ್ತಿಯ ಮಿತಿಗಳ ಬಗ್ಗೆ ನಾವು ನೆನಪಿಸಿಕೊಳ್ಳಬೇಕಾದ ಅಗತ್ಯತೆ ಇಲ್ಲಿ ಮತ್ತೊಮ್ಮೆ ಬಂದಿದೆ. ಸುಸ್ಥಾಪಿತವಾದ ನಿಯಮವೆಂದರೆ, ಪ್ರಾಸಿಕ್ಯೂಷನ್‌ನಿಂದ ಹಾಜರುಪಡಿಸಲಾದ ಸಾಕ್ಷ್ಯಾಧಾರಗಳನ್ನು ಮೌಖಿಕ ಹೇಳಿಕೆಗಳ ಹಾಗೂ

ದಸ್ತಾವೇಜಿಯ ಸಾಕ್ಷ್ಯಾಧಾರಗಳೆರಡರ ರೂಪದಲ್ಲೂ ತೆಗೆದುಕೊಳ್ಳುವುದು ಎಂಬುದಾಗಿದೆ ಮತ್ತು ಪಾಟೀ ಸವಾಲಿನ ಮುಖಾಂತರ ಪ್ರಶ್ನಿಸುವುದಕ್ಕೊಳಪಡದಂತೆ ಕಾರ್ಯನಿರ್ವಹಿಸಲಾಗಿದೆ ಹಾಗೂ ಪ್ರಾಸಿಕ್ಯೂಷನ್ ಪರವಾಗಿ ಎಲ್ಲವನ್ನು ಭಾವಿಸಲಾಗಿದೆ, ಆಪಾದಿತಸಲಾದಂತೆ ಆಪಾದಿತನ ವಿರುದ್ಧ ಯಾವುದೇ ಅಪರಾಧವನ್ನು ಸಮರ್ಥಿಸಿರದ ಸನ್ನಿವೇಶ ಉಂಟಾದಲ್ಲಿ, ಅದು, ನಿಸ್ಸಂಶಯವಾಗಿ, ಆಪಾದಿತನನ್ನು ಬಿಡುಗಡೆ ಮಾಡಲು ಅಧಿವಿಚಾರಣಾ ನ್ಯಾಯಾಲಯಕ್ಕೆ ವಾರಂಟು ನೀಡಿ, ಆಪಾದಿತನ ಪ್ರಯೋಜನಕ್ಕಾಗಿ ಮಾಡಿಸಿರುವುದಾಗಿದೆ.

26. ಪ್ರತಿವಾದದ ಮೂಲಕ ಸಾಕ್ಷ್ಯಾಧಾರದ ಮೇಲೆ ಅವಲಂಬಿಸಲು ಮತ್ತು ತನ್ನನ್ನು ಬಿಡಗಡೆ ಮಾಡುವಂತೆ ನ್ಯಾಯಾಲಯವನ್ನು ಒತ್ತಾಯಿಸಲು ಆಪಾದಿತನಿಗೆ ಅವಕಾಶವಿಲ್ಲ.

27. ಹಾಗಿದ್ದರೂ, "ನ್ಯಾಯಾಲಯದ ವಿವೇಚನೆಯಲ್ಲಿ ಯಾವ ಸಾಕ್ಷ್ಯಾಧಾರಗಳ ಆಧಾರದ ಮೇಲೆ ತೀವ್ರ ಸಂಶಯ ಉಂಟಾಗಿದೆ"ಎಂಬ ವಾಕ್ಯದ ಅರ್ಥವೇನು? ಅದನ್ನು ವಿವರಿಸಿಲ್ಲ. ಆಪಾದಿತನು ಪ್ರಾಸಿಕ್ಯೂಷನ್‌ನಿಂದ ಹಾಜರುಪಡಿಸಲಾದ ಸಾಕ್ಷ್ಯಾಧಾರಗಳಿಗೆ ಸಂಬಂಧಪಟ್ಟಂತೆ ಮಾತ್ರ ಸಾಕ್ಷ್ಯಾಧಾರಗಳನ್ನು ವಿವರಿಸಬಲ್ಲನೆ? ಆಪಾದಿತನು ಈ ಹಂತದಲ್ಲಿ ಹಾಜರುಪಡಿಸಲು ತಾನು ಆಯ್ಕೆ ಮಾಡುವಂಥ ಸಾಕ್ಷ್ಯಾಧಾರದ ಮೇಲೆ ಅವಲಂಬಿಸುವನೆ?

28. ಪ್ರಾಸಿಕ್ಯೂಷನ್‌ನಿಂದ ಹಾಜರುಪಡಿಸಲಾದ ಸಾಕ್ಷ್ಯಾಧಾರಗಳ ಮೇಲೆ ಮಾತ್ರ ಆಪಾದಿತನು ಅವಲಂಬಿಸಬಲ್ಲನು ಎಂಬ ಈ ನ್ಯಾಯಾಲಯದ ತೀರ್ಪುಗಳ ದೃಷ್ಟಿಯಿಂದ, ತೀವ್ರ ಸಂಶಯವು ಸಾಕ್ಷ್ಯಾಧಾರಗಳ ಆಧಾರದ ಮೇಲೆ ಸಾಬೀತಾಗಿದ್ದಲ್ಲಿ, ಅದನ್ನು ಪ್ರಾಸಿಕ್ಯೂಷನ್‌ನಿಂದ ಲಭ್ಯಗೊಳಿಸಲಾದ ಸಾಕ್ಷಾಧಾರಗಳಿಗೆ ಸಂಬಂಧಿಸಿದಂತೆ ಮಾತ್ರ ವಿವರಿಸತಕ್ಕದ್ದು ಎಂದು ಅರ್ಥಮಾಡಿಕೊಳ್ಳಬೇಕಿರುತ್ತದೆ. ಆಪಾದಿತನು ತನ್ನನ್ನು ಬಿಡುಗಡೆ ಮಾಡಲು ನ್ಯಾಯಾಲಯವನ್ನು ಒತ್ತಾಯಿಸುವ ವಾದಕ್ಕೆ ವಿಸ್ತೃತ ಸಂಭಾವ್ಯತೆಗಳಿಗೆ ಅಪೀಲು ಹೋಗಬಹುದು ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ.

29. ಈ ಪ್ರಕರಣದಲ್ಲಿ, ಈಗಾಗಲೇ ಗಮನಿಸಿರುವಂತೆ, ಅಪೀಲುದಾರನ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧೀನ ಸಿಬ್ಬಂದಿಯು ನೀಡಿದ ಹೇಳಿಕೆಗಳನ್ನು ಪರಿಶೀಲಿಸಿ, ದಿನಾಂಕ: 26.12.2009ರ 'ಎಎಂಸಿ'ಯ ಹಿಂದಿನ ಪಾಲುದಾರರಿಂದ ಪತ್ರವನ್ನು ಸ್ವೀಕರಿಸಿದ ಮೇಲೆ, ಹೆಚ್ಚುವರಿ ನಿರ್ದೇಶಕರು ಸೇರಿದಂತೆ, ತನ್ನ ಇಬ್ಬರು ಅಧೀನ ಸಿಬ್ಬಂದಿಯು, ವಿಷಯಕ್ಕೆ ಕಾನೂನು ಅಭಿಪ್ರಾಯದ ಅಗತ್ಯವಿದೆಯೆಂದು ಶಿಫಾರಸು ಮಾಡಿರುತ್ತಾರೆ. ಈ ಪ್ರಕರಣದಲ್ಲಿ ನಿರ್ವಿವಾದವಾಗಿರುವ ಅಪೀಲುದಾರನಿಂದ ಮಾಡಲಾದ ಟಿಪ್ಪಣಿಯು, ಅವನು ಉಪನಿರ್ದೇಶಕ(ಕಾನೂನು)ರೊಂದಿಗೆ ಮಾತನಾಡಿರುತ್ತಾನೆಂದು ಸೂಚಿಸುವಂತೆ ಕಂಡುಬರುತ್ತದೆ. ಪ್ರಾಸಿಕ್ಯೂಷನ್ ವಾದವು, ಹೆಚ್ಚಾಗಿ, ತನ್ನಿಂದ ಯಾವುದೇ ಅಭಿಪ್ರಾಯವನ್ನು ಪಡೆಯಲಾಗಿಲ್ಲವೆಂಬ ನಿರ್ದಿಷ್ಟ ನಿಲುವನ್ನು ತಳೆಯುವ ಉಪ ನಿರ್ದೇಶಕ (ಕಾನೂನು) ರವರ ಹೇಳಿಕೆಯನ್ನು ಅವಲಂಬಿಸಿರುತ್ತದೆ. ಆದ್ದರಿಂದ, ಪ್ರಾಸಿಕ್ಯೂಷನ್ ವಾದದ ಪ್ರಕಾರ, ನಿಯಮಗಳ 37ನೇ ನಿಯಮದ ಅಡಿಯಲ್ಲಿ ರಾಜ್ಯ ಸರ್ಕಾರದ ಬಳಿ ಪೂರ್ವ ಮಂಜೂರಾತಿಗಾಗಿ ಸಲ್ಲಿಕೆಯಾಗಬೇಕಾಗಿದ್ದ ಒಂದು ವಿಷಯವು ಅಪೀಲುದಾರನ ಬಳಿ, ಗಣಿಗಳ ನಿರ್ದೇಶಕರಾಗಿ ವ್ಯವಹರಿಸುವಂತೆ ಸಲ್ಲಿಕೆಯಾಯಿತು. ಇದು ಎಂಡಿಪಿಗಳ ವಿವಾದಾಂಶಕ್ಕೆ ಕಾರಣವಾಯಿತು. ಮೊದಲನೇ ಆರೋಪಿ ಅದರಲ್ಲೂ ನಿರ್ದಿಷ್ಟವಾಗಿ, ಐದನೇ ಆರೋಪಿಯ ಹಾಗೂ ಇತರ ಆರೋಪಿಗಳ ವಿರುದ್ಧ ಆರೋಪಿಸಲಾದ ಅನೇಕ ಇತರ ಕೃತ್ಯ ಹಾಗೂ ಲೋಪಗಳ ಜೊತೆ ಅಪೀಲುದಾರನನ್ನು ದೂಷಿಸುವುದಕ್ಕೆ ಅಲ್ಲಿ ಯಾವುದೇ ಇತರೆ ವಿಷಯವಿಲ್ಲ ಎಂಬುದು ಸತ್ಯವಾಗಿರುವುದರಲ್ಲಿ ಯಾವುದೇ ಅನುಮಾನವಿಲ್ಲ. ಆದಾಗ್ಯೂ, ಈ ಹಿಂದೆ ಯಾವಾಗ (ಫರ್ಮನ್ನು) ಪುನರ್ ರಚಿಸಲಾಗುವುದೋ ಆಗ ಪಡೆಯುವ ಕಾರ್ಯವನ್ನು ಹೊಂದಿದ್ದ ಅಪೀಲುದಾರನ ಪ್ರತಿವಾದವನ್ನು ಒಂದುವೇಳೆ ತಿರಸ್ಕರಿಸಿದ್ದಲ್ಲಿಯೂ ಮತ್ತು ಉಪನಿರ್ದೇಶಕರ (ಕಾನೂನು) ಜೊತೆ ವಾಸ್ತವವಾಗಿ ಆತನು ಮಾತನಾಡಿದ್ದಾನೆ ಹಾಗೂ ಆತನ ಸಲಹೆಯಂತೆ ಕಾರ್ಯ ನಿರ್ವಹಿಸಲಾಗಿದೆ ಎಂಬ ಅಪೀಲುದಾರನ ವಾದವು ಸಹ ಹಾಗೇ ಉಳಿಯುತ್ತದೆ ಮತ್ತು ಮುಂದುವರೆದು, ಉಪನಿರ್ದೇಶಕರನ್ನು (ಕಾನೂನು) ಆತನ ಹಾಜರಿಯಲ್ಲಿ ಪ್ರಶ್ನಿಸಿದಲ್ಲಿ, ದಂಡ

ಪ್ರಕ್ರಿಯಾ ಸಂಹಿತೆಯ 227ನೇ ಪ್ರಕರಣದಡಿ ಅರ್ಜಿಯನ್ನು ಪರಿಗಣಿಸಿ, ಅಪೀಲುದಾರನಿಗೆ ನ್ಯಾಯಾಲಯದ ಮುಂದೆ ಸಲ್ಲಿಸಲು ಲಭ್ಯವಾಗದಿರಬಹುದಾದಂತಹ ವಿಷಯವಾಗಿ ಅವುಗಳು ಗೋಚರಿಸಿರುತ್ತವೆ ಎಂಬ ಸಂಗತಿಯು ಸಾಬೀತಾಗಿರುತ್ತದೆ.

30. ಇದು ನಮ್ಮ ಚರ್ಚೆಯ ಫಲಿತಾಂಶವಾಗಿದ್ದು, ಇದರ ಸ್ವಾಭಾವಿಕ ಪರಿಣಾಮವು ಉಚ್ಚ ನ್ಯಾಯಾಲಯವು ಅದು ತೆಗೆದುಕೊಂಡ ನಿರ್ಧಾರದಲ್ಲಿ ತಪ್ಪೆಸಗಿದೆ ಎಂಬ ನಿಲುವನ್ನು ನಾವು ಪ್ರೇರೇಪಿಸುವುದಿಲ್ಲ ಎಂಬುದಾಗಿದೆ. ತತ್ಪರಿಣಾಮವಾಗಿ, ಅಪೀಲು ಊರ್ಜಿತವಾಗಿಲ್ಲ ಹಾಗೂ ವಜಾ ಮಾಡಲಾಗಿದೆ. ಆದಾಗ್ಯೂ, ನಮ್ಮಿಂದ ಮಾಡಲಾದ ಅವಲೋಕನಗಳು ದಂಡ ಪ್ರಕ್ರಿಯಾ ಸಂಹಿತೆಯ 227ನೇ ಕಲಂನಡಿ ಅರ್ಜಿಯನ್ನು ನಿರ್ಧರಿಸಲು ಉದ್ದೇಶಿತವಾಗಿವೆಯೇ ಹೊರತು ನ್ಯಾಯಾಲಯವನ್ನು ನಿರ್ಬಂಧಿಸುವುದಕ್ಕಲ್ಲ ಎಂಬುದನ್ನು ನಾವು ಸ್ಪಷ್ಟಪಡಿಸುತ್ತೇವೆ.

ನ್ಯಾ.
--------------------
[ಸಂಜಯ್ ಕಿಶನ್ ಕೌಲ್]

ನ್ಯಾ.
-------------------
[ಕೆ.ಎಂ. ಜೋಸೆಫ್]

ನವದೆಹಲಿ,
7ನೇ ಜನವರಿ 2020.

*******

## ಕ್ಲೇಮು ನಿರಾಕರಣೆ

"ಪ್ರಾದೇಶಿಕ ಭಾಷೆಗಳಲ್ಲಿ ಭಾಷಾಂತರಿಸಲಾದ ತೀರ್ಪುಗಳನ್ನು ಕಕ್ಷಿದಾರರ ಆಕೆಯ/ಆತನ ಸ್ಥಳೀಯ ಭಾಷೆಯಲ್ಲಿ ಅರ್ಥ ಮಾಡಿಕೊಳ್ಳುವ ಉದ್ದೇಶಕ್ಕಾಗಿ ಮಾತ್ರ ಸೀಮಿತಗೊಳಿಸಲಾಗಿದೆ ಮತ್ತು ಇತರೆ ಯಾವುದೇ ಉದ್ದೇಶಕ್ಕೆ ಅವುಗಳನ್ನು ಬಳಸಿಕೊಳ್ಳುವಂತಿಲ್ಲ. ಎಲ್ಲ ಅಧಿಕೃತ ಹಾಗೂ ಕಚೇರಿ ಉದ್ದೇಶಗಳಿಗಾಗಿ, ಹಾಗೂ ಜಾರಿಗೊಳಿಸುವ ಮತ್ತು ಅನುಷ್ಠಾನಗೊಳಿಸುವುದಕ್ಕಾಗಿ ತೀರ್ಪುಗಳ ಆಂಗ್ಲ ಭಾಷೆಯ ಆವೃತ್ತಿಯು ಅಧಿಕೃತವಾಗಿರತಕ್ಕದ್ದು."